ಅಧ್ಯಕ್ಷರು:– ಮಾನ್ಯ ಬೋಪಯ್ಯನವರೆ, ಆಯವ್ಯಯದ ಮೇಲಿನ ಚರ್ಚೆಯನ್ನು ನಾವು ಮುಂದುವರೆಸಿ, ದಯವಿಟ್ಟು ಎಲ್ಲರೂ 10 – 10 ನಿಮಿಷಗಳಲ್ಲಿ ಮುಗಿಸಬೇಕು. ಏಕೆಂದರೆ, ನಾನು ಅರ್ಧ ಗಂಟೆ ಮಾತ್ರ ಚರ್ಚೆಗೆ ಅವಕಾಶ ಕೊಡುತ್ತಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ :– ಆಯಿತು, ಬೇಗ ಮುಗಿಸುತ್ತೇನೆ.

ಅಧ್ಯಕ್ಷರು :– ದಯಮಾಡಿ ಬೇಗ ಮುಗಿಸಿ, ಈಗಾಗಲೇ ಬಹಳ ಲೇಟಾಗಿದೆ. ಇದು ಇನ್ನೂ ಆ ಹೌಸ್‌ಗೆ ಹೋಗಬೇಕು.

2005–06ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಕೆ.ಜಿ. ಬೋಪಯ್ಯ (ಮಡಿಕೇರಿ) :– ಮಾನ್ಯ ಅಧ್ಯಕ್ಷರೆ, 2005–06ನೇ ಸಾಲಿನ ಮುಂಗಡ ಪತ್ರದ ಬಗ್ಗೆ ಈಗಾಗಲೇ ಚರ್ಚೆ ನಡೆದು, ಸಾಕಷ್ಟು ಅದರ ಪರ ಹಾಗೂ ವಿರೋಧದ ವಾದಗಳು ಬಂದಿವೆ. ಈ ಒಂದು ಬಜೆಟ್‌ನಲ್ಲಿ 'ಇದೊಂದು ರೈತರ ಬಜೆಟ್, ರೈತರ ಸಾಲದ ಮೇಲಿನ ಎಲ್ಲಾ ಬಡ್ಡಿಯನ್ನು ಮನ್ನಾ ಮಾಡಿದೆ' ಅನ್ನುವಂತಾದ್ದಕ್ಕೆ ಸಾಕಷ್ಟು ಒತ್ತು ಕೊಟ್ಟು ಅನೇಕ ಪ್ರಮುಖರು ಇಲ್ಲಿ ಮಾತನಾಡಿದ್ದಾರೆ. ಆದರೆ ನನ್ನ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಒಂದು ಸಲ ಬಜೆಟ್ ಅನ್ನು ಇಲ್ಲಿ ಇಟ್ಟಮೇಲೆ ನಂತರ ಒಂದು ತಿದ್ದುಪಡಿಯನ್ನು ಕಳುಹಿಸಿದರು. ರೈತರ ಕೃಷಿ ಸಾಲ ಏನು ಇದೆ, ಅದರ ಮೇಲೆ ಮಾತ್ರ ಈ ಬಡ್ಡಿ ಮನ್ನಾ ಮಾಡಲಾಗುತ್ತದೆ ಎಂದು ಹೇಳಲಾಯಿತು. ಕೊಡಗು ಜಿಲ್ಲೆಯಲ್ಲಿ ಕಾಫಿ ಬೆಳೆಗಾರರ ಸಾಲ ಇದೆ. ಕಾಫಿಯಂತೂ ಕೃಷಿ ವ್ಯಾಪ್ತಿಗೆ ಬರುವುದಿಲ್ಲ. ಈ ಸರ್ಕಾರ ರೈತರ ಸಾಲದ ಮೇಲಿನ ಬಡ್ಡಿ ಏನು ಮನ್ನಾ ಮಾಡಿದೆ, ಅದು ಕೇವಲ ಕೃಷಿ ಸಾಲಕ್ಕೆ ಮಾತ್ರ ಅನ್ವಯಿಸುತ್ತದೆ ಎನ್ನುವುದಾದರೆ, ಇದರಿಂದ ಬಹುಶಃ ಕಾಫಿ ಬೆಳೆಗಾರರಿಗೆ ತೊಂದರೆಯಾಗುತ್ತದೆ. ಮಾನ್ಯ ಅರ್ಥ ಸಚಿವರು ತಮ್ಮ ಬಜೆಟ್ ಭಾಷಣದಲ್ಲಿ ಕಾಫಿ ಬೆಳೆಗಾರರು ಸೇರುತ್ತಾರೆಂದು ಹೇಳಿದ್ದರೂ ಕೂಡ ಮತ್ತೆ ಕೃಷಿ ಸಾಲಕ್ಕೆ ಮಾತ್ರ ಅನ್ವಯವಾಗುತ್ತದೆ ಎನ್ನತಕ್ಕ ಮಾತನ್ನು ಹೇಳಿರುವುದರಿಂದ, ತಮ್ಮ ಉತ್ತರದಲ್ಲಿ ಇದಕ್ಕೆ ಸ್ಪಷ್ಟೀಕರಣವನ್ನು ಕೊಡಬೇಕೆಂದು ನಾನು ಮಾನ್ಯ ಅರ್ಥಸಚಿವರನ್ನು ಒತ್ತಾಯ ಮಾಡುತ್ತೇನೆ. ಕೃಷಿ ಸಾಲ ಎಂದ ತಕ್ಷಣ, ಅದು ಕಾಫಿಗೆ ಅನ್ವಯಿಸುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಕೇಂದ್ರ ಸಹಕಾರ ಬ್ಯಾಂಕ್, ರೈತರಿಗೆ ವಾಹನಗಳನ್ನು ಖರೀದಿಸಲಿಕ್ಕೆ ಸಾಲವನ್ನು ಕೊಟ್ಟಿದೆ. ಇದರಿಂದಾಗಿ ಅನೇಕ ಸಣ್ಣ ಸಣ್ಣ ಬೆಳೆಗಾರರು ಮಾರುತಿ ವ್ಯಾನ್, ಜೀಪ್ ಇತ್ಯಾದಿಗಳನ್ನು

ತೆಗೆದುಕೊಂಡಿದ್ದಾರೆ. ನಂತರ ಕಾಫಿ ರೇಟ್ ಬಿದ್ದು ಹೋದ ಮೇಲೆ, ಆ ಸಾಲವನ್ನು ಮರುಪಾವತಿ ಮಾಡಲಿಲ್ಲ. ಇವತ್ತು ಕೇವಲ ಕೃಷಿ ಸಾಲಕ್ಕೆ ಮಾತ್ರ ಈ ಬಡ್ಡಿ ಮನ್ನಾ ಎಂದಾದರೆ, ಮತ್ತೆ ಇದರಿಂದ ಖಂಡಿತ ಸರ್ಕಾರದ ಈ ಯೋಜನೆಯಿಂದ ಈ ರೈತರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಹಾಗಾಗಿ ರೈತರು ಸಹಕಾರ ಬ್ಯಾಂಕ್‌ಗಳಲ್ಲಿ ಯಾವುದೇ ರೀತಿಯ ಸಾಲಗಳನ್ನು ಪಡೆದುಕೊಂಡಿದ್ದರೆ, ಈಗಾಗಲೇ ಘೋಷಣೆ ಮಾಡಿರುವಂತೆ ಆ ಬಡ್ಡಿಯನ್ನೂ ಕೂಡ ಮನ್ನಾ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ ಇವತ್ತು ಏನು ಒಂದು ಗಡುವನ್ನು ವಿಧಿಸಿದೆ ಜೂನ್ 30ರೊಳಗೆ ಈ ಎಲ್ಲಾ ಅಸಲನ್ನು ಕಟ್ಟಬೇಕು ಅನ್ನುವಂತಾದ್ದು, ಬಹುಶಃ ನಿಜವಾಗಿಯೂ ಇದು ಸಾಧುವಲ್ಲ. ಇನ್ನೂ ಕನಿಷ್ಟ ಒಂದು ವರ್ಷವಾದರೂ ಈ ಸಾಲವನ್ನು ಕಟ್ಟಲಿಕ್ಕೆ ಅವಕಾಶ ಮಾಡಿಕೊಡಬೇಕು. ಇದರಿಂದ ಎಷ್ಟು ಜನಕ್ಕೆ ಪ್ರಯೋಜನವಾಗುತ್ತದೆ ಅನ್ನುವುದನ್ನು ಕೂಡ ಇತ್ತು ವಿಮರ್ಶೆ ಮಾಡಬೇಕಾಗುತ್ತದೆ. ಸಹಕಾರ ಸಂಘಗಳಲ್ಲಿ ಅನೇಕರು, ಕಳೆದ ಬಾರಿ ಈ ಸಾಲದ ಮೇಲಿನ ಬಡ್ಡಿ ಮನ್ನಾ ಬಹುಶಃ ಆಗುವುದಿಲ್ಲ ಎಂದು ಹೇಳಿದಾಗ, ಅನೇಕ ಜನ ಸಾಲವನ್ನು ಮರುಪಾವತಿ ಮಾಡಿದ್ದಾರೆ. ಹಾಗಾದರೆ ಈ ಮರುಪಾವತಿ ಮಾಡಿದವರಿಗೆ ಏನು ಸೌಲಭ್ಯ? ಇದರ ಬಗ್ಗೆ ಕೂಡ ಮಾನ್ಯ ಅರ್ಥ ಸಚಿವರು ತಮ್ಮ ಉತ್ತರದಲ್ಲಿ ಸ್ಪಷ್ಟೀಕರಣ ಮಾಡಬೇಕು. ಈಗಾಗಲೇ ಹಿಂದೆ 2004ನೇ ಇಸವಿ ಮಾರ್ಚ್‌ಗಿಂತ ಮೊದಲು ಸಾಲ ಕಟ್ಟಿ, ಮತ್ತೆ ಹೊಸ ಸಾಲವನ್ನು ಪಡೆದುಕೊಂಡಿದ್ದರೂ ಕೂಡ ಅಂತಹವರಿಗೆ ಕೂಡ ಈ ಒಂದು ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಇನ್ನು ಅಭಿವೃದ್ಧಿ ದೃಷ್ಟಿಯಿಂದ ಕೊಡಗು ಜಿಲ್ಲೆಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಯಾವುದೇ ಜಿಲ್ಲೆಗಳಿಗೆ, ವಿಶೇಷವಾಗಿ ಉತ್ತರ ಕರ್ನಾಟಕದ ಬಗ್ಗೆ ಹೇಳಿದಾಗ, ನಂಜಂಡಪ್ಪ ವರದಿಯ ಆಧಾರದ ಮೇಲೆ ಇವತ್ತು ಅನುದಾನವನ್ನು ಬಿಡುಗಡೆ ಮಾಡುತ್ತಿದ್ದೇವೆ ಎಂದು ಬಜೆಟ್ ಭಾಷಣದಲ್ಲಿ ಹೇಳಲಾಗಿದೆ. ಆದರೆ, ನಂಜುಂಡಪ್ಪ ವರದಿಯಲ್ಲಿ ಕೊಡಗು ಜಿಲ್ಲೆಯನ್ನೂ ಕೂಡ ಪ್ರಸ್ತಾಪಿಸಲಾಗಿದೆ. ಕೊಡಗು ಜಿಲ್ಲೆಗೆ ವಿಶೇಷವಾಗಿ ನಂಜುಂಡಪ್ಪ ವರದಿಯಲ್ಲಿ ಹೇಳಿದೆ. ಈ ಜಿಲ್ಲೆಯಲ್ಲಿ ಸಾಕಷ್ಟು ಮಳೆ ಬರುತ್ತಿದೆ. ಮಳೆ ಬರುವುದರಿಂದ ರಸ್ತೆಗಳೆಲ್ಲಾ ಹಾಳಾಗುತ್ತಿವೆ, ಸೇತುವೆಗಳು ಕುಸಿದು ಬೀಳುತ್ತಿವೆ. ಹಾಗಾಗಿ ಈ ಜಿಲ್ಲೆಯಲ್ಲಿ ರಸ್ತೆಗಳನ್ನು ಆಗಿಂದಾಗ್ಗೆ ರಿಪೇರಿ ಮಾಡಲಿಕ್ಕೆ, ಸೇತುವೆಗಳ ನಿರ್ಮಾಣ ಮಾಡಲಿಕ್ಕೆ ವಿಶೇಷ ಗಮನ ಕೊಡಬೇಕು. ಮತ್ತು ಒಂದು ರಸ್ತೆ ನಿಧಿಯನ್ನು ಈ ಜಿಲ್ಲೆಗೋಸ್ಕರವೇ ಸ್ಥಾಪನೆ ಮಾಡಬೇಕು ಅನ್ನುವಂತಹ ಮಾತನ್ನು ನಂಜುಂಡಪ್ಪ ವರದಿಯಲ್ಲಿ ಹೇಳಿದ್ದರೂ ಕೂಡ, ಅದನ್ನು ಯಾವುದೂ ಅನುಷ್ಠಾನಗೊಳ್ಳಲಿಲ್ಲ. ಬಹುಶಃ ಈ ಆಧಾರದಲ್ಲಿ ಹಿಂದಿನ ಸನ್ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರ ಕೊಡಗು ಜಿಲ್ಲೆಗೆ

ವಿಶೇಷ 107 ಕೋಟಿ ರೂಪಾಯಿಗಳ ಪ್ಯಾಕೇಜ್ ಅನ್ನು ಘೋಷಣೆ ಮಾಡಿತ್ತು. ಈಗಿರುವಂತಹ ಈ ಸಮ್ಮಿಶ್ರ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಕೂಡ ನನ್ನ ಸರ್ಕಾರ ಕೊಡಗು ಪ್ಯಾಕೇಜ್‌ಅನ್ನು ಪೂರ್ಣಗೊಳಿಸುತ್ತದೆ ಅನ್ನುವಂತಹ ಮಾತನ್ನೂ ಕೂಡ ಹೇಳಿತ್ತು. ಆದರೆ ಆ ಪ್ಯಾಕೇಜ್ ಏನಾಯಿತು? ಎಂದು ಗೊತ್ತಿಲ್ಲ. ನಾನು ಎರಡು ಬಾರಿ ಇದೇ ಸದನದಲ್ಲಿ ಈ ಪ್ರಶ್ನೆಯನ್ನು ಕೇಳಿದ್ದೆ. ಆದರೆ ಆ ಪ್ರಶ್ನೆಗೆ ಉತ್ತರ ಕೊಡದೆ, ಮೂರು ಬಾರಿ ಕೂಡ ಇದಕ್ಕೆ ಸನ್ಮಾನ್ಯ ಅರ್ಥ ಮಂತ್ರಿಗಳು ಸಮಯವನ್ನು ಕೋರಿಕೊಂಡಿದ್ದಾರೆ. ಇದು ಏಕೆ ಈ ರೀತಿಯಾಗುತ್ತಿದೆ? ಕೊಡಗು ಪ್ಯಾಕೇಜ್ ಏನಾಯಿತು? ತಾವು ಅದನ್ನು ಕೈಬಿಟ್ಟಿದ್ದೀರೋ ಅಥವಾ ಕೊಡಗು ಪ್ಯಾಕೇಜ್ ಇನ್ನೂ ಇದೆಯೋ? ಎನ್ನುವುದನ್ನೂ ಕೂಡ ಮಾನ್ಯ ಉಪ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಬೇಕೆಂದು ಕೂಡ ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಬಹುಶಃ ಈ ಒಂದು ಅಭಿವೃದ್ಧಿ ಯೋಜನೆ ಎಂದು ಹೇಳಿದಾಗ, ಕಳೆದ ಬಾರಿ ಸಾಕಷ್ಟು ಮಳೆ ಜಿಲ್ಲೆಯಲ್ಲಿ ಬಂದು, ಇಲ್ಲಿಯ ಕೆ.ಆರ್.ಎಸ್. ಇರಬಹುದು ಎಲ್ಲಾ ಅಣೆಕಟ್ಟುಗಳೂ ತುಂಬಿದವು. ಆದರೆ ನಮ್ಮ ಜಿಲ್ಲೆಯಲ್ಲಿ ಮಳೆಯಿಂದ ಸಾಕಷ್ಟು ಹಾನಿಯಾಯಿತು. ಸುಮಾರು 26 ಕೋಟಿ ರೂಪಾಯಿಗಳ ನಷ್ಟವಾಯಿತು ಎನ್ನುವಂತಹ ಒಂದು ವರದಿಯನ್ನೂ ಕೂಡ ಇಲ್ಲಿನ ಕಂದಾಯ ಕಾರ್ಯದರ್ಶಿಗಳು ಖುದ್ದಾಗಿ ಜಿಲ್ಲೆಗೆ ಭೇಟಿ ನೀಡಿ ವರದಿಯನ್ನೂ ಕೂಡ ಸಲ್ಲಿಸಿದರು. ಆದರೆ ಬಿಡುಗಡೆ ಮಾಡಿದಂತಹ ಅನುದಾನ ಎಷ್ಟು ? 26 ಕೋಟಿ ರೂಪಾಯಿಗಳ ನಷ್ಟವಾಗಿದೆ ಎಂದು ಹೇಳಿದ್ದರೂ ಕೂಡ, 2 ಕೋಟಿ ರೂಪಾಯಿಗಳು ಮಾತ್ರ ಸರ್ಕಾರದಿಂದ ಬಿಡುಗಡೆಯಾಗಿದೆ. ಉಳಿದ ಹಣ ಇಲ್ಲಿಯವರೆಗೆ ಬಿಡುಗಡೆ ಆಗಿಲ್ಲ. ಹಾಗಾದರೆ ಇಲ್ಲಿ ನಂಜುಂಡಪ್ಪ ವರದಿ ಅನುಷ್ಠಾನ ಎಲ್ಲಿದೆ ಅಧ್ಯಕ್ಷರೆ? ಈ ರೀತಿ ಜಿಲ್ಲೆಯನ್ನು ಕಡೆಗಣಿಸುವಂತಹ ಒಂದು ಪ್ರವೃತ್ತಿ ಅನೇಕ ವರ್ಷಗಳಿಂದ ನಡೆದು ಬಂದಿದೆ. ಇದರಿಂದ ಜನ ಇವತ್ತು ಒಂದು ರೀತಿಯ ಪ್ರತ್ಯೇಕತಾ ಭಾವನೆಗೆ ಎಲ್ಲಿ ಪ್ರಚೋದನೆ ಕೊಡುತ್ತಿದ್ದಾರೋ ಅನ್ನುವಂತಹ ಮಾತುಗಳು ಇಡೀ ಜಿಲ್ಲೆಯಲ್ಲಿ ಕೇಳಿ ಬರುತ್ತಿದೆ. ಈ ಜಿಲ್ಲೆಯನ್ನು ಕಡೆಗಣಿಸುವಂತಹ ಒಂದು ಪ್ರವೃತ್ತಿಯನ್ನು ಬಿಡಬೇಕೆಂದು ಈ ಸಂದರ್ಭದಲ್ಲಿ ನಾನು ವಿಶೇಷವಾಗಿ ವಿನಂತಿ ಮಾಡುತ್ತೇನೆ. ಇನ್ನೊಂದು ನಮ್ಮ ಜಿಲ್ಲೆಯಲ್ಲಿ ಪ್ರಮುಖವಾಗಿ ಕಾಡುತ್ತಿರುವ ಸಮಸ್ಯೆ, ಅರಣ್ಯ ಸಮಸ್ಯೆ ಮತ್ತು ಕಾಡಾನೆಗಳ ಹಾವಳಿ. ಅನೇಕ ವರ್ಷಗಳಿಂದ ಈ ಕಾಡಾನೆಗಳನ್ನು ನಿಯಂತ್ರಣ ಮಾಡಲಿಕ್ಕೆ ಏನಾದರೂ ಒಂದು ಯೋಜನೆಯನ್ನು ಕೈಗೊಳ್ಳಬೇಕು ಎಂದು ಒತ್ತಾಯವನ್ನು ಮಾಡುತ್ತಲೇ ಬಂದಿದ್ದೇವೆ. ಆದರೆ ಈ ಕಾಡಾನೆ ನಿಯಂತ್ರಣಕ್ಕೆ ಬದಲಾಗಿ ಅಲ್ಲಿ ಏನು ಕೊಡಗಿನಲ್ಲಿ ಅರಣ್ಯ ಇತ್ತೋ, ಅದನ್ನೆಲ್ಲವನ್ನೂ ಕಡಿದು ನಾಶ ಮಾಡಲಾಗಿದೆ. ಸುಮಾರು 15 ಸಾವಿರ ಹೆಕ್ಟೇರುಗಳಷ್ಟು ಜಾಗವನ್ನು

ಕಡಿದು ಇವತ್ತು ಅಲ್ಲಿ ಏನು ಮಾಡಿದ್ದಾರೆ ಎಂದರೆ, ತೇಗದ ಮರ, ಅಕೇಶಿಯಾ ಇಂತಹ ಮರಗಳನ್ನು ನೆಟ್ಟಿದ್ದಾರೆ. ಅಲ್ಲಿನ ಬರಡು ಭೂಮಿಯಲ್ಲಿದ್ದಂತಹ, ಆನೆಗಳಿಗೆ ಆಹಾರವಾಗುವಂತಹ ಬಿದಿರು ಇತ್ಯಾದಿ ಎಲ್ಲವನ್ನೂ ನಾಶ ಮಾಡಿ, ಇವತ್ತು ತೇಗದ ಮರ ನೆಟ್ಟಿದ್ದಾರೆ, ಅಕೇಶಿಯಾ ಗಿಡಗಳನ್ನು ನೆಟ್ಟಿದ್ದಾರೆ. ಇವತ್ತು ಅದರ ಪರಿಣಾಮ ಆನೆಗಳೆಲ್ಲಾ ನಮ್ಮ ರೈತರ ಕಾಫಿ ತೋಟದಲ್ಲಿ, ಗದ್ದೆಗಳಲ್ಲಿ ಇದ್ದು, ನಿರಂತರ ನಾಶ ಮಾಡುತ್ತಿವೆ. ಈ ಒಂದು ಕಾಡಾನೆ ನಿಯಂತ್ರಣಕ್ಕೆ ಯಾವುದೇ ಒಂದು ಯೋಜನೆ, ಪ್ರಸ್ತಾವನೆ ಈ ಬಜೆಟ್‌ನಲ್ಲಿ ಇಲ್ಲದಿರುವುದನ್ನು ನಾನು ಖಂಡಿಸುತ್ತೇನೆ. ಇನ್ನಾದರೂ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ನಮ್ಮ ಜಿಲ್ಲೆಯಲ್ಲಿ ಈ ಕಾಡಾನೆ ನಿಯಂತ್ರಣಕ್ಕೆ ಒಂದು ಕ್ರಿಯಾ ಯೋಜನೆಯನ್ನು ಮಾಡಲೇಬೇಕು. ಹಿಂದೆ ಎನ್‌ಡಿಎ ಸರ್ಕಾರ ಇದ್ದಾಗ ಐದು ಕೋಟಿ ರೂಪಾಯಿ ವಿಶೇಷ ಪ್ಯಾಕೇಜ್ ಈ ಕಾಡಾನೆ ನಿಯಂತ್ರಣಕ್ಕೆ ಮಾಡಿ ಸರ್ಕಾರದಿಂದ ಏನು ಕೊಡಬೇಕು ಅದು ಏನೂ ಕೊಟ್ಟಿಲ್ಲ. ಈ ರೀತಿ ಇವತ್ತು ಒಂದು ಕಡೆಯಿಂದ ಕಾಫಿಗೆ ಬೆಲೆ ಇಲ್ಲದೆ ರೈತ ಸಂಕಷ್ಟದಲ್ಲಿದ್ದಾನೆ. ನಿರಂತರವಾದ ಕಾಡಾನೆ ಹಾವಳಿ ಬಗ್ಗೆ ಸರ್ಕಾರ ವಿಶೇಷ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ಇವತ್ತು ಕ್ರೀಡೆ ಬಗ್ಗೆ ಕೊಡಗು ಜಿಲ್ಲೆಗೆ ಎಲ್ಲರೂ ಸಾಮಾನ್ಯವಾಗಿ ಹೊಗಳುವಂತಹ ಕೊಡಗು ಕ್ರೀಡೆಗಳ ತವರೂರು. ಅದು ಹೇಳಿದ ಹಾಗೆಯೇ ಇದೆ. ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೂಡ ಈ ಜಿಲ್ಲೆಯಿಂದ ಕ್ರೀಡಾಪಟುಗಳು ನಮ್ಮ ಜಿಲ್ಲೆಗೆ, ರಾಜ್ಯಕ್ಕೆ ಹಾಗೂ ರಾಷ್ಟ್ರಕ್ಕೆ ಕೀರ್ತಿ ತಂದು ಕೊಟ್ಟಿದ್ದಾರೆ. ಆದರೆ ಈ ಕ್ರೀಡೆ ಬಗ್ಗೆ ಯಾವುದೇ ಪ್ರಸ್ತಾಪ ಇಲ್ಲ. ಅನೇಕ ವರ್ಷಗಳಿಂದ ಜಿಲ್ಲೆಯ ಜನರ ಒಂದು ಬೇಡಿಕೆ ಇದೆ. ಕೊಡಗು ಜಿಲ್ಲೆಗೆ ಒಂದು ಉತ್ತಮ ಹಾಕಿ ಸ್ಟೇಡಿಯಮ್ ಬೇಕು. ಆ ಒಂದು ಪ್ಯಾಕೇಜ್‌ನಲ್ಲಿ ಕೂಡ ತೋರಿಸಿದ್ದರು. ಆದರೆ ಇವತ್ತು ಕೊಡಗು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಹಾಕಿ ಸ್ಟೇಡಿಯಂ ಇಲ್ಲ. ಒಂದು ಅಸ್ಟ್ರೋಟರ್ಫ್ ಮಾಡುತ್ತೇವೆಂದು ಹೇಳಿದ್ದರು. ಅದನ್ನು ಇವತ್ತು ಯಾವುದೇ ಪ್ರಸ್ತಾವನೆ ಇಲ್ಲದೆ ಇರುವುದು ತೀವ್ರ ಖಂಡನೀಯ. ನಾನು ಇನ್ನಾದರೂ ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ, ಕ್ರೀಡೆ ಬಗ್ಗೆ ಈ ಜಿಲ್ಲೆಗೆ ವಿಶೇಷ ಗಮನ ಕೊಡಬೇಕು. ಮತ್ತು ಇವತ್ತು ಏನು ಹಾಕಿ ಒಂದು ಸ್ಟೇಡಿಯಂ ಬೇಡಿಕೆ ಇದೆ ಅದನ್ನು ಪೂರೈಸಬೇಕೆಂದು ಕೂಡ ನಾನು ಒತ್ತಾಯ ಮಾಡುತ್ತಿದ್ದೇನೆ. ಅದರ ಜೊತೆಗೆ ಇವತ್ತು ಕಂದಾಯ ಇಲಾಖೆ, ನಮ್ಮ ಜಿಲ್ಲೆಯಲ್ಲಿ ಯಾವುದೇ ಕಂದಾಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಮೂಲ ದಾಖಲೆಗಳು ಇಲ್ಲ. ಅದು ಸರ್ವೆ ಸ್ಕೆಚ್ ಇರಬಹುದು, ಯಾವುದೇ ಒಂದು ದಾಖಲೆಗಳು ಸರಿಯಾಗಿ ವ್ಯವಸ್ಥಿತವಾಗಿ ಇಲ್ಲ. ಅನೇಕ ಬೇಡಿಕೆಗಳನ್ನು ಕೂಡ ಈ ಬಗ್ಗೆ ಸರ್ಕಾರದ ಮುಂದೆ

ಇಟ್ಟಿದ್ದೆ. ನಮ್ಮಲ್ಲಿರುವಂತಹ ಎಲ್ಲ ಗ್ರಾಮೀಣ ಗ್ರಾಮದ ಪ್ಲ್ಯಾನ್‌ಗಳನ್ನು ಮಾಡಿ ಅದನ್ನು ಹೊಸದಾಗಿ ತಯಾರು ಮಾಡಬೇಕೆಂದು ಹೇಳುವುದು, ಇವತ್ತು ಯಾವುದಾದರೂ ರೈತ ತನ್ನ ಒಂದು ಆಸ್ತಿಯ ಬಗ್ಗೆ ನಕಾಶೆ ಕೇಳುವುದಕ್ಕೆ ಹೋದರೆ ಪ್ಲ್ಯಾನ್‌ನಲ್ಲಿ ಎಂಟ್ರಿ ಇಲ್ಲ, ಎಲ್ಲ ಹರಿದು ಹೋದ ಪರಿಸ್ಥಿತಿ ಆ ಜಿಲ್ಲೆಯಲ್ಲಿ ಇದೆ. ಇದರ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಆರ್‌ಟಿಸಿ ಇದರ ಬಗ್ಗೆ ನಮ್ಮ ಜಿಲ್ಲೆಯಲ್ಲಿ ಬಹಳ ಹೋರಾಟ ಮಾಡಿದ್ದೇವೆ. ಒಂದು ಸರ್ವೆ ನಂಬರ್ ತೆಗೆಯಬೇಕಾದರೆ ಅದಕ್ಕೆ 15 ರೂಪಾಯಿ ಕೊಡಬೇಕು. ಕೊಡಗಿನಲ್ಲಂತೂ ಅತಿ ಸಣ್ಣ ಸಣ್ಣ ಸರ್ವೆ ನಂಬರ್‌ಗಳು ಇವೆ. ಯಾವುದೇ ಒಂದು ಸಣ್ಣ ಸಾಲ ತೆಗೆದುಕೊಳ್ಳಬೇಕೆಂದರೆ ಬಹುಶಃ ಆರ್‌ಟಿಸಿಗೆ 500 ರೂಪಾಯಿ ಖರ್ಚು ಮಾಡುವ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ಇದೆ. ಈ ಆರ್‌ಟಿಸಿ ದರ ಏನಿದೆ ಅದನ್ನು 15 ರೂಪಾಯಿಯಿಂದ ಕನಿಷ್ಠ 2 ರೂಪಾಯಿಗೆ ಇಳಿಸಬೇಕೆಂದು ಕೂಡ ನಾನು ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ಇವತ್ತು ಶಿಕ್ಷಣ ನಮ್ಮ ಇಡೀ ಜಿಲ್ಲೆಯಲ್ಲಿ ಇರುವಂಥದ್ದು ಎರಡು ಸರ್ಕಾರೀ ಕಾಲೇಜುಗಳು. ಒಂದು ಸರ್ಕಾರೀ ಕಾಲೇಜು ನಾಪೊಕ್ಲುನಲ್ಲಿ ಪ್ರಾರಂಭವಾಗಿದೆ. ಮೂರು ವರ್ಷಗಳಾಯಿತು. ಆ ಶಾಲೆಗೆ ಕಟ್ಟಡ ಇಲ್ಲ. ಅಧ್ಯಾಪಕರು ಇಲ್ಲ. ಈ ಪರಿಸ್ಥಿತಿ ಸರ್ಕಾರದ ಗಮನಕ್ಕೆ ತಂದರೆ ಅದರ ಬಗ್ಗೆ ಗಮನ ಹರಿಸುತ್ತಿಲ್ಲ. ಒಂದು ರೀತಿಯಲ್ಲಿ ಯಾವುದೇ ವಿಷಯದಲ್ಲಿ ನೋಡಿದರೂ ಈ ಜಿಲ್ಲೆಯ ಬಗ್ಗೆ ಕಡೆಗಾಣಿಸುವ ಒಂದು ವ್ಯವಸ್ಥೆ ಇವತ್ತು ನಾನು ನೋಡುತ್ತಿದ್ದೇನೆ. ಜಿಲ್ಲೆಯ ಪರಿಸ್ಥಿತಿ ಇವತ್ತು ಹೇಗೆ ಇದೆ ಎಂದರೆ, ಒಂದು ತಿಂಗಳಾಯಿತು ನಮ್ಮ ಜಿಲ್ಲೆಗೆ ಜಿಲ್ಲಾಧಿಕಾರಿಗಳು ಇಲ್ಲ. ವರ್ಗ ಮಾಡಿದ್ದಾರೆ. ಹೊಸದಾಗಿ ಒಬ್ಬ ಜಿಲ್ಲಾಧಿಕಾರಿಗಳನ್ನು ಕೂಡ ಇವತ್ತಿನವರೆಗೆ ಕೊಟ್ಟಿಲ್ಲ. ಅದರ ಜೊತೆಗೆ ಇಡೀ ಜಿಲ್ಲೆಯಲ್ಲಿ ಇರುವಂಥದ್ದು ಒಂದೇ ಒಂದು ನಗರಸಭೆ. ಮಡಿಕೇರಿ ನಗರಸಭೆ ಹಿಂದೆ ಮುನಿಸಿಪಾಲಿಟಿ ಆಗಿತ್ತು. ಈಗ ನಗರಸಭೆ ಮಾಡಿದ್ದಾರೆ. ಕಳೆದ 10 ತಿಂಗಳುಗಳಿಂದ ಅಲ್ಲಿ ಚುನಾಯಿತ ಪ್ರತಿನಿಧಿಗಳಿದ್ದರೂ ಚುನಾಯಿತ ಪ್ರತಿನಿಧಿಗಳ ಒಂದು ಆಡಳಿತ ಮಂಡಳಿ ಇಲ್ಲ. ಅದಕ್ಕೆ ಒಬ್ಬ ಕಮಿಷನರ್ ಆದರೂ ಕೊಡುತ್ತಾರಾ ಅದೂ ಇಲ್ಲ. ಒಬ್ಬರು ಇನ್‌ಛಾರ್ಜ್ ಹಾಕಿ, 10 ತಿಂಗಳುಗಳಿಂದ ಇದೇ ವ್ಯವಸ್ಥೆ ಇದೆ. ಈ ಮುನಿಸಿಪಾಲಿಟಿಗೆ ಕೇಳುವವರೇ ಇಲ್ಲ. ಈ ರೀತಿಯಾಗಿ ಯಾವುದೇ ರೀತಿಯ ಅನುಕೂಲತೆಗಳಿಲ್ಲ. ಜಿಲ್ಲೆಯಲ್ಲಿ ಒಂದು ಆಸ್ಪತ್ರೆ ಇದೆ. ಆ ಆಸ್ಪತ್ರೆಯಲ್ಲಿ ಸುಸಜ್ಜಿತವಾದ ಆಸ್ಪತ್ರೆ ಅಲ್ಲಿಗೆ ಸುಮಾರು 200 ಕೋಟಿ ರೂಪಾಯಿ ವೆಚ್ಚದಲ್ಲಿ ವರ್ಲ್ಡ್‌ಬ್ಯಾಂಕ್ ಸಾಲದಿಂದ ಸುಸಜ್ಜಿತವಾದ ಆಸ್ಪತ್ರೆ ನಿರ್ಮಾಣ ಮಾಡಿ, ಅಲ್ಲಿ ಎಲ್ಲ ರೀತಿಯ ಸೌಲಭ್ಯ ಇದ್ದರೂ ವೈದ್ಯರೂ ಇಲ್ಲ. ಒಂದೇ ಆಸ್ಪತ್ರೆಯಲ್ಲಿ 12 ಜನ ವೈದ್ಯರು ಇಲ್ಲ. ಇಡೀ ಜಿಲ್ಲೆಯಲ್ಲಿ ಸುಮಾರು 96 ಜನ ವೈದ್ಯರು ಇಲ್ಲದಂತಹ ಪರಿಸ್ಥಿತಿ ಇವತ್ತು ನಮ್ಮ ಜಿಲ್ಲೆಯಲ್ಲಿ ಇದೆ. ಈ

ಒಂದು ಯಾವುದೇ ವಿಷಯದಲ್ಲಿ ತೆಗೆದುಕೊಂಡರೂ ನಮ್ಮ ಜಿಲ್ಲೆಯನ್ನು ಕಡೆಗಣಿಸುವಂತಹ ವ್ಯವಸ್ಥೆ ಆಗಿದೆ. ಬಜೆಟ್‌ನಲ್ಲಿ ನಮ್ಮ ಜಿಲ್ಲೆಗೆ ಯಾವುದೇ ಪ್ರಾಮುಖ್ಯತೆ ಕೊಡದೆ ಇರುವುದನ್ನು ನಾನು ಕಾಣುತ್ತಿದ್ದೇವೆ. ಅದರ ಜೊತೆಗೆ ಇವತ್ತು ಏನು ನಂಜುಂಡಪ್ಪನವರ ವರದಿಯನ್ನು ನಾನು ಮತ್ತೆ ಮತ್ತೆ ಏನು ಒತ್ತಾಯ ಮಾಡುತ್ತಿದ್ದೇನೆ. ಆ ನಂಜುಂಡಪ್ಪ ವರದಿಯಲ್ಲಿ ಹೇಳಿರುವಂತಹ ವಿಷಯ ಪ್ಯಾಕೇಜ್ ಅನುಷ್ಠಾನಗೊಳಿಸಬೇಕೆಂದು ಹೇಳಿ, ಪ್ಯಾಕೇಜ್ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ. ಮೂರು ಬಾರಿ ಈ ಸದನದ ಮುಂದೆ ಬಂದರೂ ತಾವು ಉತ್ತರ ಕೊಡಲಿಲ್ಲ. ಪ್ಯಾಕೇಜ್ ಬಗ್ಗೆ ತಮ್ಮ ಉತ್ತರದಲ್ಲಿ ಸ್ಪಷ್ಟೀಕರಣ ಕೊಡಬೇಕೆಂದು ಹೇಳಿ, ಈ ಬಜೆಟ್ ಇವತ್ತು ಏನು ಮಂಡನೆ ಆಗಿದೆ ಇದು ನಿಜವಾಗಿಯೂ ರೈತರ ಪರವೂ ಇಲ್ಲ. ಮೇಲ್ನೋಟಕ್ಕೆ ರೈತರ ಪರ ಎಂದು ಇದ್ದರೂ ಬಡ್ಡಿ ಮನ್ನಾ ಮಾಡುವ ವಿಷಯದಲ್ಲಿ ಇದರಿಂದ ಯಾವುದೇ ರೈತರಿಗೆ ಖಂಡಿತ ಅದು ಉಪಯೋಗ ಆಗದ ರೀತಿಯಲ್ಲಿ ಇವತ್ತು ಅದು ಮಂಡನೆ ಆಗಿದೆ. ಹಾಗಾಗಿ ಈ ಒಂದು ಬಜೆಟ್ ಮೇಲೆ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ರಘುಪತಿ ಭಟ್ (ಉಡುಪಿ) : ಮಾನ್ಯ ಅಧ್ಯಕ್ಷರೆ, 2005–06ನೇ ಸಾಲಿನ ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಇವತ್ತು ಮಾನ್ಯ ಉಪ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯನವರು ಮಂಡಿಸಿದಂತಹ ಬಜೆಟ್‌ನಲ್ಲಿ ನಮ್ಮ ಕರಾವಳಿ ಜಿಲ್ಲೆಯನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದೆ ಎಂದು ನಮಗೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಒಂದು ನಮಗೆ ಯಾಂತ್ರೀಕೃತ ಮೀನುಗಾರರಿಗೆ ಡೀಸೆಲ್ ಸಬ್ಸಿಡಿ 50,000 ಲೀಟರ್‌ನಿಂದ 55,000 ಲೀಟರ್ ಮಾಡಿರುವುದು ಸ್ವಾಗತಾರ್ಹ. ನಾವು ಉಪ ಮುಖ್ಯಮಂತ್ರಿಗಳಲ್ಲಿ ಅದನ್ನು ಕಳೆದ ಅಧಿವೇಶನದಲ್ಲಿಯೂ ಹೇಳಿದ್ದೆವು. 60,000 ದಿಂದ 75,000 ಲೀಟರ್‌ವರೆಗೆ ಅದನ್ನು ಏರಿಸಬೇಕು. ಏಕೆಂದರೆ 55,000 ಕಿಲೋ ಲೀಟರ್ ಯಾಂತ್ರೀಕೃತ ದೋಣಿಗಳಿಗೆ ಅದು ಸಾಕಾಗುವುದಿಲ್ಲ. ಅದನ್ನು ಏರಿಸಬೇಕೆಂದು ಬೇಡಿಕೆ ಇಡುತ್ತಿದ್ದೇವೆ. ಅದು ಬಿಟ್ಟರೆ ನಮ್ಮ ಜಿಲ್ಲೆಯ ಎಲ್ಲ ಉದ್ಯಮಗಳು ಇವತ್ತು ತೊಂದರೆಯಲ್ಲಿ ಇವೆ. ಗೋಡಂಬಿ ಕೃಷಿ ಇರಬಹುದು, ಅಥವಾ ಹೆಂಚು ಕಾರ್ಖಾನೆ ಇರಬಹುದು, ಅಡಿಕೆ ಇರಬಹುದು ಎಲ್ಲ ವಿಷಯದಲ್ಲಿ ಇವತ್ತು ನಮಗೆ ಬಜೆಟ್‌ನಲ್ಲಿ ಯಾವುದೇ ಉಪಯೋಗವನ್ನು ಈ ಬಜೆಟ್‌ನಲ್ಲಿ ಕೊಡಲಿಲ್ಲ. ಅದು ಬಹಳ ಬೇಸರವಾದ ಸಂಗತಿ ಆಗಿದೆ. ಇನ್ನು ನಮ್ಮಲ್ಲಿ ಕಳೆದ ಬಾರಿ ಸುನಾಮಿ ಇಡೀ ವಿಶ್ವದಲ್ಲಿ ಬಂದು ಆತಂಕ ಮಾಡಿತ್ತು. ಅದೇ ತರಹ ಕರಾವಳಿ ಭಾಗದಲ್ಲಿ ಸಮುದ್ರ ಕೊರೆತದ ಸಮಸ್ಯೆ. ಪ್ರತಿ ಮಳೆಗಾಲದಲ್ಲಿ ಮಳೆ ಬಂದೇ ಬರುತ್ತದೆ. ಸುನಾಮಿ ಬಂದ ರೀತಿಯಲ್ಲಿ

ಕರಾವಳಿ ಭಾಗದ ಜನ ಪ್ರತಿ ವರ್ಷ ಆತಂಕ ಪಡುತ್ತಿರುತ್ತಾರೆ. ಅದಕ್ಕೆ ಬೇಕಾದ ತಡೆ ಗೋಡೆ ಕರಾವಳಿ ಭಾಗದಲ್ಲಿ ರಚನೆ ಮಾಡಬೇಕಾಗಿದೆ. ಅದರ ಬಗ್ಗೆ ಯಾವುದೇ ಪ್ರಸ್ತಾವನೆ ಈ ಬಜೆಟ್‌ನಲ್ಲಿ ಇಲ್ಲ. ಕಳೆದ ಬಾರಿಯ ಬಜೆಟ್‌ನಲ್ಲಿ 9 ಕೋಟಿ ಏನು ಇದನ್ನು ತಡೆ ಗೋಡೆಗಾಗಿ ಎಂದು ಇತ್ತು ಅದನ್ನು ವಾಪಸ್ ತೆಗೆದುಕೊಳ್ಳುವುದು ಈ ಸರ್ಕಾರ ಮಾಡಿತ್ತು. ಆದರೆ ಈ ವರ್ಷ ಸುನಾಮಿ ಬಂದು ಕರಾವಳಿ ಪ್ರದೇಶದ ಜನ, ಈ ಭಾಗದಲ್ಲಿ ಬದುಕಲಿಕ್ಕೆ ಭಯಭೀತರಾಗಿದ್ದಾರೆ. ಅವರಿಗೆ ನೆಮ್ಮದಿ ತರುವಂತಹ ಸ್ವತಂತ್ರ ತಡೆಗೋಡೆ ರಚನೆ ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಕೇಂದ್ರಕ್ಕೆ 136 ಕೋಟಿ ಯೋಜನೆ ಹೋಗಿದೆ. ಅದನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸುವ ರೀತಿಯಲ್ಲಿ ಪ್ರಯತ್ನ ಮಾಡಬೇಕು. ಕನಿಷ್ಠ ರಾಜ್ಯ ಸರ್ಕಾರದಿಂದ ಅದಕ್ಕೆ ಬೇಕಾದ ಬಜೆಟ್‌ನ್ನು ಈ ಭಾಷಣದಲ್ಲಿ ಘೋಷಣೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಇನ್ನು ನಮ್ಮ ಜಿಲ್ಲೆಯ ಆರ್ಥಿಕತೆಗೆ ಬಹಳ ಪ್ರಮುಖವಾದುದು ಮೀನುಗಾರಿಕೆ. ಈ ಮೀನುಗಾರಿಕೆಗೆ ಬಂದರು ಅಭಿವೃದ್ಧಿಗೆ ನೀವು ಬಜೆಟ್‌ನಲ್ಲಿ ಅವಕಾಶ ಮಾಡಿಕೊಡಬೇಕು. ಮಲ್ಪೆ ಮೀನುಗಾರಿಕಾ ಬಂದರಿಗೆ ಎಂದು ಹೇಳುವಂತಹ ವಿನಂತಿಯನ್ನು ನಮ್ಮ ಅರ್ಥಮಂತ್ರಿಗಳ ಹತ್ತಿರ ಮಾಡಿಕೊಳ್ಳುತ್ತೇನೆ. ಯಾವುದೇ ಯೋಜನೆ ಈ ಬಜೆಟ್‌ನಲ್ಲಿ ಬರಲಿಲ್ಲ. ಇನ್ನು ನಮ್ಮ ಬಹಳ ದೊಡ್ಡ ಸಮಸ್ಯೆ ಎಲ್ಲ ಕರಾವಳಿ ಭಾಗದ ಶಾಸಕರು ಮಾತನಾಡುವ ರೀತಿಯಲ್ಲಿ ಮೀನುಗಾರಿಕಾ ರಸ್ತೆಗಳು. ಇವತ್ತು ಮೀನುಗಾರಿಕಾ ರಸ್ತೆಗಳು ಎಲ್ಲಾ ನಮ್ಮಲ್ಲಿ ಮಳೆ ಜಾಸ್ತಿ ಬಂದು ಎಲ್ಲ ಹಾಳಾಗಿವೆ. ಒಂದೇ ವಾಹನ ಹೋಗಲಿಕ್ಕೆ ಸಾಧ್ಯ ಇಲ್ಲದೆ ಇರುವ ಪರಿಸ್ಥಿತಿ ಬಂದಿದೆ. ಅದಕ್ಕೆ ಯಾವುದೇ ಒಂದು ಅನುದಾನ ಬರಲಿಲ್ಲ. ನಮ್ಮ ವಿನಂತಿ ಏನೆಂದರೆ, ಮೀನುಗಾರಿಕೆ ರಸ್ತೆಗಳಿಗೆ ವಿಶೇಷವಾಗಿ ನಮ್ಮ ಜಿಲ್ಲೆಗೆ ಎರಡು ಕೋಟಿ ರೂಪಾಯಿ ಅನುದಾನ ಕೊಡಬೇಕು. ಇದಕ್ಕೆ ನಾವು ಜಿಲ್ಲಾ ಪಂಚಾಯಿತಿ ಅಥವಾ ಪಿಡಬ್ಲ್ಯುಡಿ ಅಥವಾ ಬೇರೆ ಯಾವುದರಿಂದಲೂ ರಸ್ತೆ ರಿಪೇರಿ ಮಾಡುವುದಕ್ಕೆ ಆಗದೆ ಇರುವಂತಹ ಪರಿಸ್ಥಿತಿ ಇದೆ. ನಾನು ಮೊನ್ನೆ ಲಿಖಿತ ಪ್ರಶ್ನೆ ಕೇಳಿದಾಗ ಸರ್ಕಾರದಿಂದ ಉತ್ತರ ಬಂದಿದೆ. ಯಾವುದೂ ಬಜೆಟ್‌ನಲ್ಲಿ ಇರಲಿಲ್ಲವೆಂದು ಇದನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸುತ್ತೀರಿ ಎಂದು ಕೇಳಿದಾಗ ಶೀಘ್ರದಲ್ಲಿ ಕೈಗೊಳ್ಳುತ್ತೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರ ಇದರ ಬಗ್ಗೆ ದಿಟ್ಟವಾದ ನಿಲುವು ತಕ್ಷಣ ತೆಗೆದುಕೊಳ್ಳಬೇಕಾಗಿದೆ. ಕನಿಷ್ಠ ಪಕ್ಷ ಮೀನುಗಾರಿಕೆ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿದರೆ ನಾವು ಲೋಕೋಪಯೋಗಿ ಇಲಾಖೆ ಮೂಲಕ ಅದನ್ನು ಮಾಡುವುದು ಮಾಡಬಹುದು. ಅದರಿಂದ ಅದನ್ನು ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಇನ್ನು ಮೀನುಗಾರಿಕೆಗೆ ಸಂಬಂಧಪಟ್ಟಂತೆ ಬೇರೆ ಎಲ್ಲಾ ಶಾಸಕರುಗಳೆಲ್ಲರೂ ಒತ್ತಾಯ

ಮಾಡಿದಂತೆ ಮಂಜುಗಡ್ಡೆ ಘಟಕಗಳನ್ನು ಇಂದು ಪುನಶ್ಚೇತನಗೊಳಿಸಬೇಕಾಗಿದೆ. ನಮ್ಮ ಕರಾವಳಿ ಭಾಗದಲ್ಲಿ ಸುಮಾರು 150 ಮಂಜುಗಡ್ಡೆ ಘಟಕಗಳಿದ್ದದ್ದು ಈಗಾಗಲೇ ಸುಮಾರು 40 ಘಟಕಗಳು ಇದರಲ್ಲಿ ಮುಚ್ಚಿವೆ. ಈ ಘಟಕಗಳವರು ವಿದ್ಯುತ್ ಬಿಲ್‌ನ್ನೂ ಕೂಡ ಕಟ್ಟುವುದಕ್ಕೆ ಆಗದೇ ಬಹಳ ತೊಂದರೆಯನ್ನು ಎದುರಿಸುತ್ತಿದ್ದಾರೆ. ಆದಕಾರಣ ಒಂದು ಯೂನಿಟ್ ವಿದ್ಯುತ್‌ಗೆ ಕನಿಷ್ಠ ಒಂದು ರೂಪಾಯಿಯ ಸಬ್ಸಿಡಿಯನ್ನು ಕೊಡುವ ಕಾರ್ಯವನ್ನು ಸರ್ಕಾರ ಮಾಡಬೇಕು. ನಮ್ಮ ಉಪ ಮುಖ್ಯಮಂತ್ರಿಗಳು ಮೀನುಗಾರಿಕಾ ಬೋಟ್‌ಗೆ ಉಪಯೋಗಿಸುವ ಡೀಸೆಲ್‌ಗೆ 55 ಸಾವಿರ ಕಿಲೋಲೀಟರ್‌ಗೆ ಸಬ್ಸಿಡಿಯನ್ನು ಘೋಷಿಸಿ ರುವುದು ಸ್ವಾಗತಾರ್ಹ. ಇದರ ಜೊತೆಗೆ ಆ ಮೀನುಗಾರರು ಬದುಕಬೇಕು ಎಂದರೆ ಮಂಜುಗಡ್ಡೆ ಘಟಕಕ್ಕೆ ಬಳಸುವ ವಿದ್ಯುತ್‌ಗೆ ಒಂದು ಯೂನಿಟ್‌ಗೆ ಒಂದು ರೂಪಾಯಿಯ ಸಬ್ಸಿಡಿಯನ್ನು ಕೊಡಬೇಕೆಂದು ನಾನು ವಿನಂತಿಸುತ್ತೇನೆ. ತೋಟಗಾರಿಕೆ ಇಲಾಖೆಯಿಂದ ಕೋಲ್ಡ್ ಸ್ಟೋರೇಜ್‌ಗೆ ಒಂದು ರೂಪಾಯಿಯ ಸಬ್ಸಿಡಿಯನ್ನು ಈಗ ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ನಮ್ಮ ಮೀನುಗಾರಿಕೆ ಉಳಿಯಬೇಕೆಂದರೆ ಮಂಜುಗಡ್ಡೆ ಘಟಕಕ್ಕೂ ಒಂದು ಯೂನಿಟ್ ವಿದ್ಯುತ್‌ಗೆ ಒಂದು ರೂಪಾಯಿಯ ಸಬ್ಸಿಡಿಯನ್ನು ಕೊಡಬೇಕೆಂದು ವಿನಂತಿಯನ್ನು ಮಾಡುತ್ತಿದ್ದೇನೆ. ಅದೇ ತರಹ ಈಗ ಇವರಿಗೆ 4 ಪರ್ಸೆಂಟ್ ಟ್ಯಾಕ್ಸ್ ಇದೆ. ಇದನ್ನು ಸೊನ್ನೆ ಪರ್ಸೆಂಟ್ ಟ್ಯಾಕ್ಸ್‌ನ್ನಾಗಿ ಮಾಡಬೇಕಿದೆ. ಇದನ್ನು ಮಾಡದಿದ್ದರೆ ಇವೊತ್ತು ಯಾವುದೇ ಮಂಜುಗಡ್ಡೆ ಘಟಕಗಳು ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಇದನ್ನು ಕಾರ್ಯರೂಪಕ್ಕೆ ತರಬೇಕೆನ್ನುವ ವಿನಂತಿಯನ್ನು ನಾನು ಮಾಡುತ್ತಿದ್ದೇನೆ. ನಮ್ಮ ಉಪ ಮುಖ್ಯಮಂತ್ರಿಗಳ ಹತ್ತಿರ ನನ್ನ ಇನ್ನೊಂದು ವಿನಂತಿ ಏನೆಂದರೆ, ನಮ್ಮ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರ್ತೆದಾರಿಕೆ ಬಹಳ ದೊಡ್ಡ ಉದ್ಯಮವಾಗಿ ಬೆಳೆಯುತ್ತಿದೆ. ಇದನ್ನೇ ಬಹಳ ಜನರು ಅವಲಂಬಿಸಿ ಜೀವನ ನಡೆಸುತ್ತಿರುವವರು ನಮ್ಮ ಜಿಲ್ಲೆಗಳಲ್ಲಿ ಇದ್ದಾರೆ. ಇವತ್ತು ಮೂರ್ತೇದಾರಿಕೆಗೆ ವಿಶೇಷವಾದ ಪ್ಯಾಕೇಜನ್ನು ಕೊಡುತ್ತೇವೆಂದು ಕಳೆದ ಸರ್ಕಾರಗಳು ಘೋಷಣೆಗಳನ್ನು ಮಾಡಿತ್ತು. ನಾವು ಇವೊತ್ತು ನಮ್ಮ ಉಪ ಮುಖ್ಯಮಂತ್ರಿಗಳ ಹತ್ತಿರ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಮೂರ್ತೇದಾರಿಕೆಯ ಸಹಕಾರಿ ಸಂಸ್ಥೆ ಗಳನ್ನು ಬೆಳೆಸುವಂಥ ದೃಷ್ಟಿಯಲ್ಲಿ ಕನಿಷ್ಠ 10 ಕೋಟಿ ರೂಪಾಯಿಗಳ ಒಂದು ಪ್ಯಾಕೇಜನ್ನು ಮೂರ್ತೇದಾರಿಕೆಯನ್ನು ಪುನಃಶ್ಚೇತನಗೊಳಿಸುವುದಕ್ಕೋಸ್ಕರ ಕೊಡಬೇಕೆನ್ನುವ ವಿನಂತಿಯನ್ನು ನಾನು ಮಾಡಿಕೊಳ್ಳುತ್ತಿದ್ದೇನೆ. ಇದೊಂದು ಬಹಳ ಪ್ರಾಮುಖ್ಯವಾದಂಥ ಬೇಡಿಕೆಯಾಗಿದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಈಗ ಅಬ್ಕಾರಿ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದಾರೆ. ಇವೊತ್ತು ಮೂರ್ತೇದಾರಿಕೆಯನ್ನು ಅಬ್ಕಾರಿ ಇಲಾಖೆಯ

ಅಡಿಯಲ್ಲಿ ಕೆಲಸ ಮಾಡುತ್ತಿದೆ. ಇದೊಂದು ಬೇಡಿಕೆ ನಮ್ಮ ಜಿಲ್ಲೆಯ ಎಲ್ಲಾ ಮೂರ್ತೇದಾರಿಕೆಗಳವರದ್ದಾಗಿದೆ. ಇದನ್ನು ಅಬ್ಕಾರಿ ಇಲಾಖೆಯಿಂದ ಹೊರತುಪಡಿಸಬೇಕು ಎನ್ನುವ ಬೇಡಿಕೆ ಇದೆ. ಏಕೆಂದರೆ, ಅಬ್ಕಾರಿ ಇಲಾಖೆಗೆ ಇದರಿಂದ ಯಾವುದೇ ರೀತಿಯ ಆದಾಯವಿಲ್ಲ. ಮುಂದೆ ಇದ್ದಂಥ ಲೀಟರ್ ಫೀ ಇವೊತ್ತು ಮನ್ನಾ ಆಗಿದೆ. ಆದರೆ ಇವೊತ್ತು ಮೂರ್ತೇದಾರಿಕೆಯವರು ಗೌರವದಿಂದ ಅದನ್ನು ಆ ಉದ್ಯಮವನ್ನು ನಡೆಸಬೇಕು ಎನ್ನುವುದಾದರೆ ಅಬ್ಕಾರಿ ಇಲಾಖೆಯಿಂದ ಅದನ್ನು ಹೊರತುಪಡಿಸಬೇಕು. ಅದೊಂದು ಸಾಂಪ್ರದಾಯಿಕವಾದ ಉದ್ದಿಮೆ. ಬಹಳ ಹಿಂದಿನಿಂದ ನಡೆದುಕೊಂಡು ಬಂದಂಥ ಉದ್ದಿಮೆ. ಹೆಚ್ಚಾಗಿ ಸಾಮಾಜಿಕವಾಗಿ ಹಿಂದುಳಿದ ವರ್ಗದವರೇ ಈ ಉದ್ದಿಮೆಯನ್ನು ನಡೆಸುವುದರಿಂದ ಅದರ ಬಗ್ಗೆ ವಿಶೇಷವಾದ ಕಾಳಜಿಯನ್ನು ನಮ್ಮ ಉಪ ಮುಖ್ಯಮಂತ್ರಿಗಳು ಮಾಡಬೇಕೆನ್ನುವ ವಿನಂತಿಯನ್ನು ನಾನು ಮಾಡುತ್ತೇನೆ. ಇನ್ನು ಬಜೆಟ್‌ನಲ್ಲಿ ಇವೊತ್ತು ಪ್ರವಾಸೋದ್ಯಮಕ್ಕೆ ಯಾವುದೇ ವಿಶೇಷವಾದ ಸವಲತ್ತನ್ನು ಕೊಟ್ಟ ಹಾಗೆ ಕಾಣುತ್ತಿಲ್ಲ. ಒಂದು ಕಿಲೋಮೀಟರ್ ಅಂತರಕ್ಕೆ ಹೋಟೆಲ್‌ಗಳನ್ನು ಮಾಡುವ ಯೋಜನೆಯೊಂದನ್ನು ಬಿಟ್ಟರೆ ಪ್ರವಾಸೋದ್ಯಮವನ್ನು ಬೆಳೆಸುವಂಥ ದೃಷ್ಟಿಯಲ್ಲಿ, ಪ್ರವಾಸಿಗರನ್ನು ಆಕರ್ಷಿಸುವಂಥ ದೃಷ್ಟಿಯಲ್ಲಿ ಯಾವುದೇ ರೀತಿಯ ಯೋಜನೆ ಈ ಬಜೆಟ್‌ನಲ್ಲಿ ಕಾಣುತ್ತಿಲ್ಲ. ಅದಕ್ಕೆ ವಿಶೇಷವಾದ ಒತ್ತನ್ನು ಕೊಡಬೇಕು. ಅದರಲ್ಲೂ ವಿಶೇಷವಾಗಿ ನಮ್ಮ ಜಿಲ್ಲೆ ಪ್ರವಾಸೋದ್ಯಮಕ್ಕೆ ಹೇಳಿ ಮಾಡಿಸಿದಂಥ ಜಿಲ್ಲೆಯಾಗಿದೆ. ಒಂದು ಕಡೆ ಪೂರ್ತಿಯಾಗಿ ಕರಾವಳಿ ಭಾಗದ ಸಮುದ್ರ ತೀರ. ಅದನ್ನು ಎಷ್ಟು ಬೆಳೆಸಬಹುದು, ನನ್ನ ಕ್ಷೇತ್ರದಲ್ಲಿಯೇ ಸೇಂಟ್ ಮೇರೀಸ್ ಎನ್ನುವಂಥ ಒಂದು ಐಲ್ಯಾಂಡ್ ಇದೆ. ಅದನ್ನು ಸರ್ಕಾರ ಮನಸ್ಸು ಮಾಡಿ ಅಭಿವೃದ್ಧಿ ಪಡಿಸಿದರೆ ಇವೊತ್ತು ಯಾವುದೇ ವಿದೇಶದಲ್ಲೂ ಇಲ್ಲದಿರುವಂಥ ಒಳ್ಳೆಯ ಪ್ರವಾಸಿ ಕೇಂದ್ರವನ್ನಾಗಿ ಬೆಳೆಸಬಹುದು. ಅದಕ್ಕಾಗಿ ವಿಶೇಷವಾದ ಸವಲತ್ತನ್ನು ಕೊಡಬೇಕು. ಒಂದು ಕಡೆ ಪಶ್ಚಿಮ ಘಟ್ಟಗಳಿವೆ. ಈ ಕಡೆಯಲ್ಲಿ ಸಮುದ್ರ. ಇದನ್ನು ಒಳ್ಳೆಯ ಪ್ರವಾಸೋದ್ಯಮ ತಾಣವನ್ನಾಗಿ ಬೆಳೆಸುವುದಕ್ಕೆ ಒಳ್ಳೆಯ ಅವಕಾಶ ನಮ್ಮ ಜಿಲ್ಲೆಯಲ್ಲಿ ನನ್ನ ಕ್ಷೇತ್ರದಲ್ಲಿದೆ. ನನ್ನ ಕ್ಷೇತ್ರದಲ್ಲಿ ಬೇರೆ ಯಾವುದನ್ನು ಬೆಳೆಸದಿದ್ದರೂ ನನ್ನ ಕ್ಷೇತ್ರವನ್ನು ಪ್ರವಾಸೋದ್ಯಮ ತಾಣವನ್ನಾಗಿ ಬೆಳೆಸಬಹುದು. ಇನ್ನು ಐ.ಟಿ. ಕೇಂದ್ರಗಳನ್ನು ಮಾಡಿದ್ದಾರೆ. ಎಲ್ಲರಿಗೂ ತಿಳಿದ ಹಾಗೆ ನಮ್ಮ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಹಿತಿ ತಂತ್ರಜ್ಞಾನದ ವಿದ್ಯಾವಂತ ವಿದ್ಯಾರ್ಥಿಗಳು ಬಹಳಷ್ಟು ಜನರಿದ್ದಾರೆ. ನಮ್ಮಲ್ಲಿ ಬೇಕಾದಷ್ಟು ವಿದ್ಯಾ ಸಂಸ್ಥೆಗಳು ಇರುವುದರಿಂದ ಅಲ್ಲೊಂದು ಐ.ಟಿ. ಪಾರ್ಕ್‌ನ್ನು ರಚನೆ ಮಾಡಿದರೆ ಖಂಡಿತವಾಗಿ ಅಲ್ಲಿಯ ವಿದ್ಯಾರ್ಥಿಗಳಿಗೆ ಒಳ್ಳೆಯ ಉದ್ಯೋಗಾವಕಾಶ ಕೊಟ್ಟಂತಾಗುತ್ತದೆ. ಆ ಬಗ್ಗೆ ನಮ್ಮ ಉಪ ಮುಖ್ಯಮಂತ್ರಿಗಳು

ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ ದಿವಂಗತ ಗುಂಡೂರಾವ್‌ರವರು ಮುಖ್ಯಮಂತ್ರಿಯಾಗಿದ್ದಾಗ ವರಾಹಿ ಯೋಜನೆಗೆ ನಮ್ಮ ಜಿಲ್ಲೆಯಲ್ಲಿ ಅಡಿಗಲ್ಲನ್ನು ಹಾಕಿದರು. ಆದರೆ, ಇವೊತ್ತಿಗೂ ಆ ವರಾಹಿ ಯೋಜನೆಯನ್ನು ಸಂಪೂರ್ಣ ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗಲಿಲ್ಲ. ಇವೊತ್ತಿಗೂ ನಮ್ಮಲ್ಲಿ ಬಂದಂಥ ನಾಯಕರುಗಳು ಪತ್ರಿಕೆಗಳಲ್ಲಿ ಹೇಳಿ ಘೋಷಣೆಗಳನ್ನು ಮಾಡಿ ಹೋಗುತ್ತಾರೆ. ವರಾಹಿ ಯೋಜನೆಯನ್ನು ನಾವು ಈ ವರ್ಷದಲ್ಲಿ ಪೂರ್ಣಗೊಳಿಸುತ್ತೇವೆ, ಬರುವ ವರ್ಷದಲ್ಲಿ ಪೂರ್ತಿಗೊಳಿಸುತ್ತೇವೆ ಎಂದು ಹೇಳಿ ಹೋಗುತ್ತಾರೆ. ಆದರೆ ಇವೊತ್ತಿನ ಬಜೆಟ್‌ನಲ್ಲಿ ನೋಡಿದರೆ ವರಾಹಿ ಯೋಜನೆಯನ್ನು ಪೂರ್ತಿಗೊಳಿಸುವುದಕ್ಕೆ ಯಾವುದೇ ಒಂದು ಹಣಕಾಸನ್ನೂ ಇಡಲಿಲ್ಲ. ಇದನ್ನು ನೋಡಿದರೆ ನಮಗೆ ನೀರಾವರಿ ಬಗ್ಗೆ ಬಹಳ ಬೇಸರವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ವರಾಹಿ ಯೋಜನೆ ಅನುಷ್ಠಾನವಾದರೆ ನಮ್ಮ ಸಕ್ಕರೆ ಕಾರ್ಖಾನೆಗಳು ಉಳಿಯುತ್ತವೆ. ಏಕೆಂದರೆ ಕಬ್ಬನ್ನು ಬೆಳೆಯುವ ರೈತರಿಗೆ ಬೇಕಾದಂಥ ನೀರಿನ ವ್ಯವಸ್ಥೆ ಈ ಯೋಜನೆಯಿಂದ ಆಗುತ್ತದೆ. ಆ ಕಾರಣಕ್ಕಾಗಿ ಈ ಬಗ್ಗೆ ಪ್ರಯತ್ನವನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ಈಗಾಗಲೇ ಎಲ್ಲರೂ ಪ್ರಸ್ತಾಪ ಮಾಡಿದಂತೆ ಕೆರೆಗಳ ಹೂಳೆತ್ತುವುದು ಕ್ಷೇತ್ರಗಳ ಮಟ್ಟದಲ್ಲಿ ಅದಕ್ಕೆ ಅನುದಾನವನ್ನು ಕೊಡಬೇಕು. ಕೆರೆಗಳ ಹೂಳೆತ್ತುವುದರಿಂದ ನಮ್ಮಲ್ಲಿ ಸಾಕಷ್ಟು ನೀರಿನ ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕೆ ಆಗುತ್ತದೆ. ಇನ್ನು ನಮ್ಮ ಜಯಪ್ರಕಾಶ್ ಹೆಗಡೆಯವರು ಯಾವಾಗಲೂ ಹಿಂಡಿ ಅಣೆಕಟ್ಟಿನ ಬಗ್ಗೆ ಪ್ರಸ್ತಾಪ ಮಾಡುತ್ತಿರುತ್ತಾರೆ. ಹಿಂಡಿ ಅಣೆಕಟ್ಟನ್ನು ರಚನೆ ಮಾಡಬೇಕೆನ್ನುವ ಬಗ್ಗೆ ಅವರು ಹೇಳುತ್ತಿರುತ್ತಾರೆ. ಸರ್ಕಾರದ ಮಟ್ಟದಲ್ಲಿ ಏನಿದೆಯೆಂದರೆ ಕರಾವಳಿ ಭಾಗದಲ್ಲಿ ಬೇಕಾದಷ್ಟು ನೀರಿದೆ ಎನ್ನುವ ವರದಿ ಇದೆ. ಆದರೆ ಆ ಭಾಗದ ಹಳ್ಳಿಗಳಿಗೆ ಹೋದರೆ ಎಲ್ಲಾ ಕಡೆ ಕುಡಿಯುವ ನೀರಿನ ಸಮಸ್ಯೆ ಇದೆ. ಆದುದರಿಂದ ಇದಕ್ಕೆ ಬಹಳ ದೊಡ್ಡ ಉಪ್ಪು ನೀರಿನ ಹಿಂಡಿ ಅಣೆಕಟ್ಟನ್ನು, ಇವೊತ್ತು ಪಶ್ಚಿಮ ವಾಹಿನಿ ಯೋಜನೆ ಇವೊತ್ತು ಅನುಷ್ಠಾನಕ್ಕೆ ಬರುತ್ತದೆ ಎನ್ನುವಂಥ ಒಂದು ಅಭಿಪ್ರಾಯ ಇದೆ. ಆದರೆ ಈ ಬಗ್ಗೆ ಬಜೆಟ್‌ನಲ್ಲಿ ಅದನ್ನು ಕಾಣಿಸಲಿಲ್ಲ. ಪಶ್ಚಿಮ ವಾಹಿನಿ ಯೋಜನೆಯನ್ನು ಅನುಷ್ಠಾನಕ್ಕೆ ತರುವುದಕ್ಕೆ ದಯವಿಟ್ಟು ನಮ್ಮ ಉಪ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ. ಇನ್ನು ನಮ್ಮ ಕಡೆ ಬಹಳ ದೊಡ್ಡ ಸಮಸ್ಯೆ ಏನಿದೆಯೆಂದರೆ ಕಂದಾಯ ಇಲಾಖೆಯವರು 94 ಸಿ ಪ್ರಕಾರ ಅರ್ಜಿ ಕೊಟ್ಟು ಹಲವರು ಹಕ್ಕು ಪತ್ರ ಇಲ್ಲದೇ ಮನೆಗಳನ್ನು ಕಟ್ಟಿಕೊಂಡಿರುವವರು ಬಹಳಷ್ಟು ಜನರು ನಮ್ಮ ಕ್ಷೇತ್ರದಲ್ಲಿದ್ದಾರೆ. ಅವರಿಗೆ ಇವೊತ್ತಿಗೂ ಹಕ್ಕುಪತ್ರಗಳನ್ನು ಕೊಡುವುದಕ್ಕೆ ಆಗಿಲ್ಲ. ಕೆಲವು ಜನರು ಇನ್ನೂ ಅರ್ಜಿಯನ್ನೇ

ಕೊಟ್ಟಿಲ್ಲ. ಕಳೆದ ಬಾರಿಯಿಂದ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅಂಥವರಿಗೆ ಒಂದು ಬಾರಿ ಅರ್ಜಿಯನ್ನು 94 ಸಿ ಪ್ರಕಾರ ಅರ್ಜಿಯನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಕಂದಾಯ ಇಲಾಖೆಯವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಭೂಮಿ ಯೋಜನೆ ಬಗ್ಗೆ ಹೇಳಬೇಕೆಂದರೆ ಈ ಯೋಜನೆ ಬಹಳ ಯಶಸ್ವಿಯಾಯಿತು ಎಂದು ಸರ್ಕಾರ ಹೇಳಿಕೊಳ್ಳುತ್ತಿದೆ. ಆದರೆ ನಮ್ಮ ಕ್ಷೇತ್ರದಲ್ಲಿ ನಮ್ಮ ತಾಲ್ಲೂಕಿನಲ್ಲಿ ನೋಡಿದರೆ ಈ ಆರ್.ಟಿ.ಸಿ.ಯ ಸಮಸ್ಯೆ ಬಹಳ ಇದೆ. ಈ ವಿಚಾರದಲ್ಲಿ ನಮ್ಮ ಜನರು ಪಡುವ ತೊಂದರೆ ಹೇಳತೀರದು. ಈ ಆರ್.ಟಿ.ಸಿ.ಯಲ್ಲಿ ಕೆಲವೊಮ್ಮೆ ಇಲಾಖೆಯವರ ತೊಂದರೆಯಿಂದಲೇ ಹೆಚ್ಚುಕಮ್ಮಿ ಆಗಿದೆ. ಹೆಸರು ಬದಲಾವಣೆಯಾಗಿದೆ, ಸರ್ವೆ ನಂಬರ್ ಬದಲಾವಣೆಯಾಗಿದೆ. ಅಂಥದ್ದು ನನ್ನ ಕ್ಷೇತ್ರದಲ್ಲಿ ಸುಮಾರು 30 ಸಾವಿರ ಕೇಸ್‌ಗಳಿವೆ. ಆರ್.ಟಿ.ಸಿ. ಇಲ್ಲದೇ ಇರುವಂಥದ್ದು. ಯಾರದೋ ಆರ್.ಟಿ.ಸಿ ಯಾರದೋ ಹೆಸರಿನಲ್ಲಿರುವಂಥದ್ದು ಇದೆ. ಇದರ ಬಗ್ಗೆ ಸಾಫ್ಟ್‌ವೇರ್ ಒಂದನ್ನು ಕೊಡಬೇಕು. ಇದನ್ನು ಕಂದಾಯ ಇಲಾಖೆಯಿಂದ ಮಾಡಬೇಕಾಗಿದೆ. ಈ ಭೂಮಿ ಯೋಜನೆಯಲ್ಲಿ ಇರುವ ಆರ್.ಟಿ.ಸಿ. ಸಮಸ್ಯೆಯನ್ನು ಸರಿಪಡಿಸಬೇಕಾಗಿದೆ. ಇನ್ನು ಹೊಸದಾಗಿ ಜಿಲ್ಲೆಗಳಾಗಿರುವ ಕಡೆಗಳಲ್ಲಿ ಜಿಲ್ಲಾಧಿಕಾರಿಗಳ ಸಂಕೀರ್ಣವಾಗಿದೆ. ಆದರೆ ನಮ್ಮ ಜಿಲ್ಲೆಗೇ ಇನ್ನೂ ಜಿಲ್ಲಾಧಿಕಾರಿಗಳ ಸಂಕೀರ್ಣವೇ ಇಲ್ಲ. ಜಿಲ್ಲಾಧಿಕಾರಿಗಳ ಕಛೇರಿ ಒಂದು ಸಣ್ಣ ಕಛೇರಿಯಲ್ಲಿದೆ. ಅದಕ್ಕಾಗಿ ಇದಕ್ಕೆ ಬೇಕಾಗುವಂಥ ಜಾಗವನ್ನು ಮಣಿಪಾಲದ ಸರ್ಕಾರಿ ಜಾಗವನ್ನು ನೋಡಿದೆ. ಅದಕ್ಕೆ ಬೇಕಾದಂಥ ಸುಮಾರು 16 ಕೋಟಿ ರೂಪಾಯಿಗಳ ವ್ಯವಸ್ಥೆ ಇದೆ. ಆದರೆ ಸರ್ಕಾರ ತನ್ನ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕಾಗಿದೆ. ಯಾವುದೇ ಒಂದು ಒತ್ತಡಕ್ಕೂ ಸರ್ಕಾರ ಮಣಿಯಬಾರದು. ಕೆಲವು ಸ್ಥಾಪಿತ ಹಿತಾಸಕ್ತಿಗಳು ಕೆಲವರು ಆ ಜಾಗವನ್ನು ಒಳಗೆ ಹಾಕಬೇಕು ಎಂದು ಹೇಳುವಂಥ ಏಕೈಕ ದೃಷ್ಟಿಯಿಂದ ಕೋರ್ಟ್, ಕಛೇರಿ ಎಂದು ಹೇಳಿಕೊಂಡು ಅದಕ್ಕೆ ತೊಂದರೆ ಮಾಡುತ್ತಿರಬಹುದು. ಆದರೆ ಈಗ ಆ ಮಣಿಪಾಲದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಅವಶ್ಯಕವಿದೆ. ಆದುದರಿಂದ ತಕ್ಷಣದಲ್ಲಿ ಸರ್ಕಾರ ಅದನ್ನು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕಡೆಯದಾಗಿ ಲೋಕೋಪಯೋಗಿ ಇಲಾಖೆ ಬಗ್ಗೆ ಹೇಳುವುದಾದರೆ ಇಂದು ಉಡುಪಿ ಜಿಲ್ಲಾ ಕೇಂದ್ರವಾಗಿದೆ. ಜಿಲ್ಲಾ ಕೇಂದ್ರವಾದ ಮೇಲೆ ಪ್ರಮುಖ ರಸ್ತೆಯಾದ ಉಡುಪಿ–ಮಣಿಪಾಲ ರಸ್ತೆ ಬಹಳ ಕಿರಿದಾಗಿದೆ. ಸುಮಾರು 18 ಫೀಟ್ ರಸ್ತೆ ಮಾತ್ರವಿದೆ. ಮಣಿಪಾಲದಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ಹೆಡ್ ಆಫೀಸ್ ಇದೆ. ಮಣಿಪಾಲದಲ್ಲಿ ಬೇಕಾದಷ್ಟು ವಿದ್ಯಾ ಕೇಂದ್ರಗಳಿವೆ. ಬಹಳ ಆಸ್ಪತ್ರೆಗಳೂ ಇವೆ. ಇಲ್ಲಿ ವಾಹನ ದಟ್ಟಣೆ ಹೆಚ್ಚಾಗಿದ್ದರೂ ಕೂಡ ಕೇವಲ 18 ಫೀಟ್‌ನ ರಸ್ತೆಯಲ್ಲಿಯೇ ಎಲ್ಲಾ ವಾಹನಗಳು ಹೋಗಬೇಕಾಗಿದೆ. ಇದನ್ನು ಅಗಲೀಕರಣ ಮಾಡಬೇಕಾಗಿದೆ.

ಮಣಿಪಾಲ–ಉಡುಪಿ ರಸ್ತೆಯ ಅಗಲೀಕರಣಕ್ಕೆ ಸುಮಾರು 5 ಕೋಟಿ ಯೋಜನೆಯನ್ನು 15 ಕೋಟಿ ಯೋಜನೆಯನ್ನಾಗಿ ಮಾಡಿದೆ. ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಲು 8 ಕೋಟಿ ರೂಪಾಯಿಗಳು ಬೇಕಾಗಿದೆ. ನಾನು ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಭೂ ಸ್ವಾಧೀನಕ್ಕಾಗಿ ಬೇಕಾಗಿರುವ 8 ಕೋಟಿ ರೂಪಾಯಿಗಳನ್ನು ನಮ್ಮ ಜಿಲ್ಲೆಗೆ ಕೊಟ್ಟರೆ ಈ ಕಾರ್ಯವನ್ನು ಮಾಡುತ್ತೇವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದುಸವದಿ (ಜಮಖಂಡಿ) :– ಮಾನ್ಯ ಅಧ್ಯಕ್ಷರೆ, ಆಯವ್ಯಯದ ಮೇಲೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ವಿಶೇಷವಾಗಿ ನನ್ನ ಕ್ಷೇತ್ರಕ್ಕೆ ಸೀಮಿತವಾಗಿರತಕ್ಕಂಥ ನಾಲ್ಕಾರು ವಿಷಯಗಳನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಬಯಸುತ್ತೇನೆ. ಈಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಶೇಷವಾಗಿ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ಯಾವುದೇ ಗ್ರಾಮೀಣ ರೈತನ ಮಕ್ಕಳು, ಕೂಲಿಕಾರನ ಮಕ್ಕಳು ಮತ್ತು ಹರಿಗಿರಿಜನರ ಮಕ್ಕಳುಗಳು ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಸದುದ್ದೇಶದಿಂದ ಸಾಕಷ್ಟು ಯೋಜನೆಗಳ ಮುಖಾಂತರ ಅಂದರೆ ಮರಳಿ ಬಾ ಶಾಲೆಗೆ, ಸರ್ವ ಶಿಕ್ಷಣ ಅಭಿಯಾನ, ಹೀಗೆ ಹತ್ತಾರು ಯೋಜನೆಗಳ ಮುಖಾಂತರ ಶಿಕ್ಷಣದ ಬಗ್ಗೆ ಸರ್ಕಾರಗಳು ಯೋಜನೆಗಳನ್ನು ಹಾಕಿಕೊಂಡಿರುವ ಸಂದರ್ಭದಲ್ಲಿ ಅದರಲ್ಲೂ ವಿಶೇಷವಾಗಿ ನನ್ನ ತಾಲ್ಲೂಕಾದ ಜಮಖಂಡಿಯಲ್ಲಿ ಈ ಬಗ್ಗೆ ಹೇಳಬೇಕೆಂದರೆ, ವಿಶೇಷವಾಗಿ ನನ್ನ ತಾಲ್ಲೂಕು ಜಮಖಂಡಿಯಲ್ಲಿ ಸಾಕಷ್ಟು ಪಟ್ಟಣ ಮತ್ತು ದೊಡ್ಡ ದೊಡ್ಡ ಹಳ್ಳಿಗಳು, ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದ ನಮ್ಮ ಭಾಗದಲ್ಲಿರುವ ಹಳ್ಳಿಗಳು ಎಂದರೆ ಮಲೆನಾಡಿನ ಪ್ರಕಾರ ಹತ್ತಿಪ್ಪತ್ತು ಮನೆಗಳಿದ್ದರೆ ಹಳ್ಳಿಗಳು ಅನಿಸುವುದಿಲ್ಲ. ನಮ್ಮ ಹಳ್ಳಿಗಳಲ್ಲಿ ಕನಿಷ್ಟ ಎಂದರೂ ಜನಸಂಖ್ಯೆ 3,000 ದಿಂದ ಮೇಲ್ಪಟ್ಟು 25,000 ದವರೆಗೂ ಜನಸಂಖ್ಯೆ ಇರುವಂತಹ ಹಳ್ಳಿಗಳು ನಮ್ಮ ಭಾಗದಲ್ಲಿರುವುದರಿಂದ, ನನ್ನ ತಾಲ್ಲೂಕಿನಲ್ಲೂ ಹತ್ತು ಸಾವಿರ ಮೇಲ್ಪಟ್ಟು ಇರುವಂತಹ ಜನಸಂಖ್ಯೆಯಿರುವಂತಹ ಹಳ್ಳಿ ಮತ್ತು ಪಟ್ಟಣಗಳಿಗೆ ಇವತ್ತಿನವರೆಗೂ ಪ್ರೌಢಶಾಲೆಗಳು ಇಲ್ಲ. ನಾಲ್ಕಾರು ಪ್ರೌಢಶಾಲೆಗಳೂ ಇದ್ದರೂ ಸಹ ಅಲ್ಲಿ ಶಿಕ್ಷಕರ ಕೊರತೆ ಇದೆ. ಗಣಿತ ಶಿಕ್ಷಕರು, ಸೈನ್ಸ್ ಶಿಕ್ಷಕರು, ಹಿಂದಿ ಶಿಕ್ಷಕರು ಇಲ್ಲ, ಈ ರೀತಿಯಾಗಿ ಹಳ್ಳಿಯ ರೈತರ ಮಕ್ಕಳಿಗೆ ಯಾವುದೇ ರೀತಿಯಲ್ಲಿ ವ್ಯವಸ್ಥಿತವಾಗಿ ಶಿಕ್ಷಣವನ್ನು ಒದಗಿಸುವಂತಹ ಯೋಜನೆಯನ್ನು ಸರ್ಕಾರ ಹಾಕಿಕೊಂಡಿಲ್ಲ. ನನ್ನ ತಾಲ್ಲೂಕಿನಲ್ಲಿ ಪದವಿಪೂರ್ವ ಕಾಲೇಜಿನ ಪರಿಸ್ಥಿತಿಯೂ ಕೂಡ ಅದೇ ರೀತಿಯಾಗಿದೆ. ಅದರ ಬಗ್ಗೆ ನಾನು ನಾಲ್ಕಾರು ಬಾರಿ ಸಂಬಂಧಪಟ್ಟ ಸಚಿವರಿಗೆ ಪತ್ರಗಳನ್ನು ಕೊಟ್ಟರೂ ಕೂಡ ಅಲ್ಲಿಗೆ ಶಿಕ್ಷಕರನ್ನು ತುಂಬುವಂತಹ ಯೋಜನೆಯನ್ನು ಮಾಡಿಲ್ಲ. ನಾನು ಮಾನ್ಯ ಉಪ

ಮುಖ್ಯಮಂತ್ರಿಗಳಿಗೆ ಅಭಿನಂದಿಸುತ್ತೇನೆ. ಈ ಬಾರಿ ಶಿಕ್ಷಣಕ್ಕೆ ಹೋದ ಬಾರಿಗಿಂತ ಜಾಸ್ತಿ ಮಾಡಿ 11 ಪರ್ಸೆಂಟಿಗಿಂತಲೂ ಬಜೆಟ್ ಜಾಸ್ತಿ ಮಾಡಿ 4,300 ಕೋಟಿ ರೂಪಾಯಿಯಿಂದ ರೂ. 4,800 ಕೋಟಿ ರೂಪಾಯಿಯವರೆಗೆ ಮಾಡಿದ್ದಾರೆ. ನಾನು ವಿನಂತಿ ಮಾಡಿಕೊಳ್ಳುವೇನೆಂದರೆ ಶಿಕ್ಷಣ ಎನ್ನುವುದು ಈ ರಾಜ್ಯದಲ್ಲೆ ಹಾಗೂ ದೇಶದಲ್ಲಿ ಬಹಳ ಮಹತ್ವ ಇದೆ. ಅದರ ವಿಚಾರವಾಗಿ ಇನ್ನು 200 ರಿಂದ 300 ಕೋಟಿ ರೂಪಾಯಿಯವರೆಗೂ ಕೊಟ್ಟರೂ ಅಡ್ಡಿಯಿಲ್ಲ. ಆದರೆ ಹಳ್ಳಿಯಲ್ಲಿ ಓದುತ್ತಿರುವಂತಹ ಮಕ್ಕಳು ಉಚ್ಚಮಟ್ಟದ ಶಿಕ್ಷಣದಿಂದ ವಂಚಿತರಾಗದ ಹಾಗೆ ಅಲ್ಲಿಗೆ ಪ್ರೌಢಶಾಲೆಗಳನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಅಲ್ಲಿರುವಂತಹ ಪ್ರೌಢಶಾಲೆಗಳಲ್ಲಿ ಸೈನ್ಸ್, ಗಣಿತ, ಹಿಂದಿ, ಇಂಗ್ಲಿಷ್ ಶಿಕ್ಷಕರು ಇಲ್ಲದೆ ಇದ್ದರೆ ಅಲ್ಲಿರುವಂತಹ ರೈತರು ಅಥವಾ ಪ್ರಜ್ಞಾವಂತರೂ ತಮ್ಮ ಮಕ್ಕಳನ್ನು ಆ ಹಳ್ಳಿಯ ಶಾಲೆಗಳಲ್ಲಿ ಹಾಕುತ್ತಿದ್ದಾರೆ. ಅವರೆಲ್ಲಾ ತಮ್ಮ ಮಕ್ಕಳನ್ನು ಆ ಶಾಲೆಯಿಂದ ಪಟ್ಟಣದ ಶಾಲೆಗಳಿಗೆ ಕಳುಹಿಸುವಂತಹ ವ್ಯವಸ್ಥೆ ಇವತ್ತು ನಡೆದಿದೆ. ಯಾರಿಗೆ ಹಣವುಳ್ಳವಂತಹವರು ತಮ್ಮ ಮಕ್ಕಳನ್ನು ಹಳ್ಳಿಗಳಿಂದ ಪಟ್ಟಣದ ಶಾಲೆಗಳಿಗೆ ಕಳುಹಿಸಿ ಕಲಿಸುವುದಕ್ಕೆ ಸಾಧ್ಯವಿದೆ ವಿನಃ ಹಳ್ಳಿಯಲ್ಲಿರುವ ಬಡ ರೈತ ಅಥವಾ ಕೂಲಿಕಾರ ತಮ್ಮ ಮಕ್ಕಳನ್ನು ಹೈಸ್ಕೂಲ್ ಮಟ್ಟದ ಶಿಕ್ಷಣವನ್ನು ಕೊಡುವುದು ಸಾಧ್ಯವಿಲ್ಲ. ಅಂತಹ ಪಟ್ಟಣದ ಶಾಲೆಗೆ ಹಾಕಿದರೂ ಕೂಡ ಆ ಮಗು ಬುದ್ಧಿ ಮಟ್ಟ ಮೇಲೆ ಬರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ಮೂಲಭೂತವಾದಂತಹ ಶಿಕ್ಷಣ ಅವನಿಗೆ ಸಿಗುವುದಿಲ್ಲ. ಅವನಿಗೆ ಇಂಗ್ಲಿಷ್, ಗಣಿತ, ಸೈನ್ಸ್, ಹಿಂದಿ ಇವ್ಯಾವುದು ಸಬ್ಜೆಕ್ಟ್‌ಗಳು ಇಲ್ಲ. ಮೊನ್ನೆ ಇಲ್ಲೆ ಸದನದಲ್ಲಿ ಚರ್ಚೆಯಾಯಿತು. ನನ್ನ ತಾಲ್ಲೂಕಿನ ಸಾವಳಗಿಯಲ್ಲಿ ಜೂನಿಯರ್ ಕಾಲೇಜಿನಲ್ಲಿ ಕೇವಲ ಒಬ್ಬರೆ ಒಬ್ಬರು ಮಾಸ್ತರು. ಹೆಡ್‌ಮಾಸ್ತರು ಅವರೆ, ಪ್ಯೂನ್ ಅವನೆ, ಗಣಿತ ಮಾಸ್ತರು ಅವನೆ, ಹಿಂದಿ ಮಾಸ್ತರ್ ಅವನೆ, ಎಲ್ಲಾ ಅವನೆ ಮಾಡಬೇಕು. ಈ ರೀತಿಯಾಗಿ ತಾವು ಶಿಕ್ಷಣದ ಬಗ್ಗೆ ಕಾಳಜಿ ವಹಿಸಿದರೆ ಯಾವ ರೀತಿ ಹಳ್ಳಿಯಲ್ಲಿರುವ ಬಡರೈತರ, ಕೂಲಿಕಾರರ, ಹರಿಜನ ಗಿರಿಜನರ ಮೇಲೆ ತಮಗೆ ಪ್ರೀತಿ ಇದೆ ಎನ್ನುವುದನ್ನು ನೋಡಿದರೆ ಗೊತ್ತಾಗುತ್ತದೆ. ತಾವು ಹಳ್ಳಿಗಳಲ್ಲಿ ಶಿಕ್ಷಣದ ಬಗ್ಗೆ ನಿರ್ಲಕ್ಷ ಮಾಡಿದ್ದೀರಿ. ಎಲ್ಲಾ ಕೇವಲ ಪಟ್ಟಣಗಳಲ್ಲಿ ಕ್ರೋಢೀಕೃತವಾಗಬೇಕು. ಉಚ್ಚಮಟ್ಟದ ವ್ಯಾಪಾರಸ್ಥರು ಅಥವಾ ಶ್ರೀಮಂತರ ಮಕ್ಕಳಿಗೆ ಮಾತ್ರ ಒಳ್ಳೆಯ ಶಿಕ್ಷಣ ದೊರೆಯಬೇಕು. ಎಸ್‌ಸಿ:ಎಸ್‌ಟಿ ಹಾಗೂ ರೈತರ ಮಕ್ಕಳಿಗೆ ಒಳ್ಳೆಯ ಶಿಕ್ಷಣ ದೊರೆಯಬಾರದು. ಅವರು ಕೂಲಿ ಮಾಡಬೇಕು ಅಥವಾ ಒಕ್ಕಲುತನವನ್ನೆ ಮಾಡಬೇಕು ಎನ್ನುವ ದುರುದ್ದೇಶದಿಂದ ಹಳ್ಳಿಗಳಲ್ಲಿ ಶಿಕ್ಷಕರನ್ನು ಕೊಡುತ್ತಿಲ್ಲ. ಅದೂ ಅಲ್ಲ ಮಾನ್ಯ ಅಧ್ಯಕ್ಷರೆ, ಅಲ್ಲಿರುವಂತಹ ಪ್ರೌಢಶಾಲೆಗಳಿಗೆ ಕೋಣೆಗಳು ಸಹ ಇಲ್ಲದೆ ನನ್ನ ಕ್ಷೇತ್ರದಲ್ಲಿರುವಂತಹ ಅನೇಕ

ಹೈಸ್ಕೂಲ್‌ಗಳಲ್ಲಿ ಒಂದೊಂದು ಕೋಣೆಯಲ್ಲಿ 120 ರಿಂದ 150 ರವರೆಗೆ ಮಕ್ಕಳು ಕುಳಿತುಕೊಂಡು ಕಲಿಯುತ್ತಾರೆ. ಅವರು ಕಿಟಕಿಯ ಕಟ್ಟೆ ಮೇಲೆ ಕುಳಿತುಕೊಂಡು ಒಂದೊಂದು ಡೆಸ್ಕ್ ಮೇಲೆ ಹತ್ತತ್ತು ಮಂದಿ ಕುಳಿತುಕೊಳ್ಳುತ್ತಾರೆ ಅಥವಾ ಕೆಳಗೆ ಕುಳಿತುಕೊಳ್ಳುತ್ತಾರೆ. ಏನು ವ್ಯವಸ್ಥೆ ಇದು. ಶಿಕ್ಷಣಕ್ಕಾಗಿ 4,800 ಕೋಟಿ ರೂಪಾಯಿ ಖರ್ಚು ಮಾಡುತ್ತಿರುವಂತಹ ಸಂದರ್ಭದಲ್ಲಿ ಶಾಲೆಯಲ್ಲಿ ಕೋಣೆಗಳು ಏಕಾಗಿ ಇಲ್ಲ. ಶಾಲೆಗಳಿಗೆ ಕೋಣೆಗಳನ್ನು ಕೊಡುವಂತಹ ವ್ಯವಸ್ಥೆಯಾಗಬೇಕು. ಅದೇ ರೀತಿಯಾಗಿ ಒಂದು ಪದವಿ ಪೂರ್ವ ಕಾಲೇಜಿನಲ್ಲಿ ಸಹ ಇದೇ ಪರಿಸ್ಥಿತಿ ನಮ್ಮ ತಾಲ್ಲೂಕಿನಲ್ಲಿದೆ. ವಿಶೇಷವಾಗಿ ಇಷ್ಟೊಂದು ಅನುದಾನ ನಮ್ಮ ಶಿಕ್ಷಣ ಕ್ಷೇತ್ರಕ್ಕೆ ಕೊಡುವಾಗ ಇನ್ನು ಸ್ವಲ್ಪ ಹೆಚ್ಚಾದರೂ ಅಡ್ಡಿಯಿಲ್ಲ. ನಮ್ಮ ಕ್ಷೇತ್ರಕ್ಕೆ ಬೇರೆ ಯಾವುದೇ ವಿಷಯದಲ್ಲಿ ಅನುದಾನ ಕಡಿಮೆಯಾದರೂ ಪರವಾಗಿಲ್ಲ. ಶಿಕ್ಷಣಕ್ಕೆ ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ನಾನು ಕೇಳಿಕೊಳ್ಳುತ್ತೇನೆ.

ಇನ್ನು ನೇಕಾರರ ವಿಚಾರ, ನಾನು ಈ ಮೊದಲೆ ಪ್ರಸ್ತಾಪ ಮಾಡಿದ ಪ್ರಕಾರ ಈ ರಾಜ್ಯದಲ್ಲಿ ಹೆಚ್ಚು ತುಳಿತಕ್ಕೆ ಒಳಗಾದವರು ಎಂದರೆ ನೇಕಾರರ ಸಮೂಹ. ಅದು ನೇಕಾರರ ಪಂಗಡ. ಅವರಿಗೆ ಕೇವಲ 27 ಕೋಟಿ ರೂಪಾಯಿಯನ್ನು ಈ ಬಾರಿಯ ಬಜೆಟ್‌ನಲ್ಲಿ ಅನುದಾನವನ್ನು ಕೊಟ್ಟಿದ್ದಾರೆ. ಹಿಂದಿನ ಸರ್ಕಾರ 105 ಕೋಟಿ ರೂಪಾಯಿ ಬಜೆಟ್‌ನಲ್ಲಿ ಘೋಷಣೆ ಮಾಡಿತ್ತು. ಆಗ ವಿದ್ಯುತ್ ರಿಯಾಯಿತಿ ಇರಲಿಲ್ಲ. ಕೇವಲ ಕೈಮಗ್ಗ ನೇಕಾರರ ಸಲುವಾಗಿ 105 ಕೋಟಿ ರೂಪಾಯಿ ಬಜೆಟ್ ಅನ್ನು ಘೋಷಣೆ ಮಾಡಿತ್ತು. ಆದರೆ ಈಗ ಕೇವಲ 27 ಕೋಟಿ ರೂಪಾಯಿ ಕೊಡುವುದರಿಂದ, ಅದು ಏತಕ್ಕೆ ಸಾಲುತ್ತದೆ? ಕೇವಲ ವಿದ್ಯುತ್ ರಿಯಾಯಿತಿ ಕೊಟ್ಟರೂ ಕೂಡ ಸಾಕಾಗುವುದಿಲ್ಲ. ಆದುದರಿಂದ ನೇಕಾರರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ನೇಕಾರರಿಗೆ 200 ಕೋಟಿ ರೂಪಾಯಿ ಬಜೆಟ್‌ನಲ್ಲಿ ಪ್ಯಾಕೇಜ್ ಘೋಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಾನು ಅನೇಕ ವಿಷಯಗಳನ್ನು ಮಾತನಾಡುವುದಿದ್ದರೂ ಸಹ ಮಾನ್ಯ ಅಧ್ಯಕ್ಷರು ಎಚ್ಚರಿಕೆ ಕೊಟ್ಟಿದ್ದರಿಂದ ಒಂದೇ ಒಂದು ವಿಷಯವನ್ನು ಹೇಳಬಯಸುತ್ತೇನೆ. ನಾನು ಎರಡು ಬಾರಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಉತ್ತರ ಕರ್ನಾಟಕದಲ್ಲೆ ನಾಲ್ಕೈದು ತಾಲ್ಲೂಕುಗಳಿಗೆ ಮೂಲ ಆಧಾರವಾಗಿರುವಂತಹ ಕುಡಿಯುವ ನೀರಿನ ಕೃಷ್ಣಾ ನದಿ ಬತ್ತಿ ಹೋಗಿ ಒಂದು ತಿಂಗಳಾಯಿತು. ಮಾನ್ಯ ಅಧ್ಯಕ್ಷರೆ, ಈ ಭಾಗದಲ್ಲಿ ಕಾವೇರಿಗೆ ಒಂದು ಕೂದಲು ಕೊಂಕಿದರೂ ಸಹ ಇಡೀ ಕರ್ನಾಟಕ ರಾಜ್ಯಕ್ಕೆ ರಾಜ್ಯವೆ ಎದ್ದು ನಿಲ್ಲುತ್ತದೆ. ಆದರೆ ಉತ್ತರ ಕರ್ನಾಟಕಕ್ಕೆ ಏಕೆ ನಿರ್ಲಕ್ಷ ಮಾಡುತ್ತೀರಿ? ಅಲ್ಲಿ ಲಕ್ಷಗಟ್ಟಲೆ ಜಾನುವಾರುಗಳು, ಪಶು ಪಕ್ಷಿಗಳು ನೀರಿನಲ್ಲೆ ಇರುವಂತಹ ಜಲಚರ ಪ್ರಾಣಿಗಳು ಅವುಗಳು ಮೀನು,

ಮೊಸಳೆ ಯಾವುದೇ ಜೀವಿಗಳು ಇರಬಹುದು. ಅದಲ್ಲದೆ 500 ಕೋಟಿ ರೂಪಾಯಿಯ ಕಬ್ಬಿನ ಬೆಳೆ ನಾಶವಾಗುವಂತಹ ಸಂದರ್ಭ ಇದ್ದರೂ ಸಹ ಕೇವಲ ಎರಡು ಟಿಎಂಸಿ ಮಹಾರಾಷ್ಟ್ರದಿಂದ ಅಥವಾ ನಮ್ಮದೆ ಪಾಲು ಕಳಮೋಡಿಯಲ್ಲೆ ಇದೆ. ಅಲ್ಲಿ 4 ಟಿಎಂಸಿ ನೀರನ್ನು ಬಳಸಿಕೊಂಡಿಲ್ಲ. ಮಾನ್ಯ ಪ್ರಕಾಶ್ ಹುಕ್ಕೇರಿಯವರು ಮೊನ್ನೆ ಒಬ್ಬ ರೈತನ ಆತ್ಮಹತ್ಯೆ ಆದಾಗ ಅಲ್ಲಿಗೆ ತಕ್ಷಣ ಬಂದು ನಮ್ಮ ಬೇಡಿಕೆಗೆ ಸ್ಪಂದಿಸಿ ನಮಗೆ ಎರಡು ಟಿಎಂಸಿ ನೀರನ್ನು ಬಿಟ್ಟರು. ಆದರೆ ಒಂದು ಚಿಕ್ಕದಾದ ಕಾಲುವೆ ಮುಖಾಂತರ ನೀರು ಬೇರೆ ಕಡೆ ಹೋಗಿದ್ದರಿಂದ ಆ ನೀರು ಕೂಡ ಸಿಗಲಿಲ್ಲ. ಲೆಕ್ಕಕ್ಕೆ 2 ಟಿಎಂಸಿ ನೀರು ಬಿಟ್ಟಂತೆ ಆಯಿತು. ಆದರೆ ನಮಗೆ ಬಂದು ಸೇರಿದ್ದು ಕೇವಲ ಅರ್ಧ ಟಿಎಂಸಿ ಮಾತ್ರ. ನಮ್ಮ ಪಾಲು ಬರಬೇಕಾದಂತಹ ಕಳಮೋಡಿಯಿಂದ ಎರಡು ಟಿಎಂಸಿ ನೀರನ್ನು ಬಿಡಿ. 2 ಟಿಎಂಸಿಗೆ 5 ಕೋಟಿ ರೂಪಾಯಿ ಹೋದರೂ ಅಡ್ಡಿಯಿಲ್ಲ. ಅಲ್ಲಿ ಸಾವಿರಾರು ಕೋಟಿ ರೂಪಾಯಿ ಅಷ್ಟು ಈ ರಾಜ್ಯಕ್ಕೆ ಉಳಿತಾಯವಾಗುತ್ತದೆ. ಮತ್ತು ಲಕ್ಷಾಂತರ ಮಂದಿ ರೈತರ ಬದುಕು ತಮ್ಮ ಸರ್ವಸ್ವವನ್ನು ಸುರಿದು ಬೆಳೆಸಿರುವಂತಹ ಬೆಳೆ ಅಥವಾ ಕುಡಿಯುವ ನೀರಿರಬಹುದು. ಆ ರೈತರ ಬದುಕು ಹಾಳಾಗುವಂತಹ ಸಂದರ್ಭದಲ್ಲಿ ಅದರ ಬಗ್ಗೆ ಒಂದು ನಾವು ಹತ್ತಾರು ಜನ ಶಾಸಕರು ಹೋಗಿ ಒಂದು ಮನವಿಯನ್ನು ಕೊಟ್ಟಿದ್ದೆವು. ಮೊನ್ನೆ ನಮ್ಮ ಮಾನ್ಯ ಸಚಿವರಾದ ಪ್ರಕಾಶ್ ಹುಕ್ಕೇರಿಯವರು ಸ್ಪಂದನ ಮಾಡಿದ್ದಾರೆ. ಮಾನ್ಯ ಪ್ರಕಾಶ್ ಹುಕ್ಕೇರಿಯವರಾಗಲಿ, ಮಲ್ಲಿಕಾರ್ಜುನ ಖರ್ಗೆಯವರಾಗಲಿ ಸ್ಪಂದನ ಮಾಡಿ, ತಮ್ಮ ಎಲ್ಲಾ ಪ್ರಯತ್ನವನ್ನು ಅವರು ಮಾಡಿದ್ದಾರೆ. ಇದರ ಬಗ್ಗೆ ಇನ್ನು ಹೆಚ್ಚಿನ ಗಮನವನ್ನು ಹರಿಸಿ ಮಾನ್ಯ ಮುಖ್ಯಮಂತ್ರಿಗಳು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ತಕ್ಷಣ ಇದೇ ವಾರದಲ್ಲಿ ನೀರನ್ನು ಬಿಡಿಸಿದರೆ, ಅಲ್ಲಿ ಹತ್ತಾರು ಸಾವಿರ ರೂಪಾಯಿಯ ಹಾನಿಯನ್ನು ತಡೆಗಟ್ಟಬಹುದು. ಅಲ್ಲಿ ಗುಳೆ ಹೋಗುತ್ತಿರುವಂತಹ ರೈತರನ್ನು ತಡೆಗಟ್ಟಬಹುದು. ಅಲ್ಲಿರುವಂತಹ ಪಶು, ಪ್ರಾಣಿ, ಪಕ್ಷಿಗಳನ್ನು ಉಳಿಸಬಹುದು ಎಂದು ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ. ಇನ್ನು ಕೇವಲ ಒಂದೇ ಒಂದು ವಿಚಾರ, ಅದು ರೇಷನ್ ಕಾರ್ಡು ಸಲುವಾಗಿ ಬಹಳಷ್ಟು ಚರ್ಚೆ ಮೊನ್ನೆ ಈ ಸದನದಲ್ಲೆ ಆಯಿತು. ಪ್ರತಿಯೊಬ್ಬ ನೇಕಾರರಿಗೂ ಸಹ ರೇಷನ್ ಕಾರ್ಡು ಕೊಡುವಂತಹ ವ್ಯವಸ್ಥೆಯಾಗಬೇಕು. ಅದಲ್ಲದೆ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಬಿಪಿಎಲ್ ಕಾರ್ಡು ಕೊಡುವುದಕ್ಕೆ ಒಂದು ಸರ್ವೆ ನಡೆದಿದೆ. ಅದರ ವಿಚಾರವಾಗಿ ನಾನು ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಕುಟುಂಬದ ಸಂಖ್ಯೆಗನುಗುಣವಾಗಿ ಏನು ರೇಷನ್ ಕಾರ್ಡು ವಿತರಣೆ ಮಾಡುತ್ತಿದ್ದೀರಿ. ಈಗ ಒಂದು ಕುಟುಂಬದಲ್ಲಿ 20 ಜನ

ಇರುತ್ತಾರೆ. ಅವರಿಗೂ ಒಂದೇ ಕಾರ್ಡು ಕೊಡುತ್ತೀರಿ. ಒಂದು ಕುಟುಂಬದಲ್ಲಿ ಕೇವಲ ಒಬ್ಬರು ಇರುತ್ತಾರೆ. ಅವರಿಗೂ ಒಂದೇ ಕಾರ್ಡು ಕೊಡುತ್ತೀರಿ. ಈ ರೀತಿ ತಾರತಮ್ಯ ಮಾಡದೆ ವ್ಯಕ್ತಿಗತ ಆಧಾರವಾಗಿ ಇಟ್ಟುಕೊಂಡು, ಆ ಕುಟುಂಬದಲ್ಲಿ ಎಷ್ಟು ಜನಸಂಖ್ಯೆ ಇದೆ. ಅದರ ಆಧಾರವನ್ನು ಇಟ್ಟುಕೊಂಡು ರೇಷನ್ ವಿತರಣೆ ಮಾಡುವಂತಹ ವ್ಯವಸ್ಥೆಯಾಗಬೇಕೆಂದು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ನನ್ನ ತಾಲ್ಲೂಕಿನಲ್ಲಿ ಹೆಚ್ಚಿನ ಬಡವರು ಇರುವುದರಿಂದ ಕಾರ್ಡುಗಳನ್ನು ಕೊಡಬೇಕಾದರೆ ಅದಕ್ಕೆ ಸಾಕಷ್ಟು ಕಂಡೀಷನ್‌ಗಳನ್ನು ಹಾಕಿದ್ದಾರೆ. ಏಕೆಂದರೆ, ನಮ್ಮ ಬಯಲು ಸೀಮೆಯಲ್ಲಿ ಇರುವಂತಹ ರೈತರು ಸುಮಾರು 20 ಎಕರೆ ಜಮೀನು ಇದ್ದರೂ ಕೂಡ ರೈತ ಕೂಲಿ ಮಾಡುವುದಕ್ಕೆ ಹೋಗುತ್ತಾನೆ. ಆದುದರಿಂದ ಇಷ್ಟು ಜಮೀನು ಇದ್ದರೆ ಎನ್ನುವ ಕಂಡೀಷನ್ ಹಾಕಲಾರದೆ ಅವರಿಗೆ ಬರುವಂತಹ ಇನ್‌ಕಂ ಆಧಾರದ ಮೇಲೆ ಬಿಪಿಎಲ್ ಕಾರ್ಡು ವಿತರಣೆ ಮಾಡುವಂತಹ ವ್ಯವಸ್ಥೆಯಾಗಬೇಕು. ಅದಲ್ಲದೆ ಆ ಕುಟುಂಬದಲ್ಲಿ ಇರುವಂತಹ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ತಾವು ರೇಷನ್ ವಿತರಣೆ ಮಾಡಿದರೆ, ಅದರಿಂದ ಸದುಪಯೋಗವಾಗುತ್ತದೆ ಎನ್ನುವ ಮಾತನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಿ ನನಗೆ ಈ ಅಧಿವೇಶನದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಕಾಗೇರಿಯವರೆ ನೀವು ಹಿರಿಯ ಸದಸ್ಯರು, ಬಹಳ ಸಾರಿ ಪಾರ್ಟಿಸಿಪೇಟ್ ಮಾಡಿದ್ದೀರಿ. ಯಾವುದಾದರೂ ಮುಖ್ಯವಾದ ವಿಷಯಗಳನ್ನು ಐದು ನಿಮಿಷದಲ್ಲೆ ಹೇಳಿಬಿಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ):– ಮಾನ್ಯ ಅಧ್ಯಕ್ಷರೆ, ನಿಜವಾಗಲೂ ನಾನು ಮಾತನಾಡಬಾರದು ಎಂದು ಯೋಜನೆ ಮಾಡಿದ್ದೆ. ಆದರೆ..

ಅಧ್ಯಕ್ಷರು :– ಯಾವುದಾದರೂ ಮುಖ್ಯವಾದ ಪಾಯಿಂಟ್ ರೆಫರ್ ಮಾಡುವುದಿದ್ದರೆ 5 ನಿಮಿಷ ತೆಗೆದುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಈ ಆಯವ್ಯಯದ ಮೇಲೆ ನಮ್ಮ ಜಿಲ್ಲೆಗೆ ಕುರಿತಂತೆ ವಿಷಯವನ್ನು ಪ್ರಸ್ತಾಪಿಸಬೇಕು ಎನ್ನುವ ಹಿನ್ನೆಲೆಯಲ್ಲಿ ನಾನು ಕೆಲವು ಸಂಗತಿಯನ್ನು ಮಾತನಾಡುವುದಕ್ಕೆ ಬಯಸುತ್ತಿದ್ದೇನೆ. 2005–06 ನೇ ಸಾಲಿನ ಆಯವ್ಯಯ ಅಭಿವೃದ್ಧಿ ಪರವಾಗಿ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ನಾನು ಏಕೆ ಈ ಸ್ಪಷ್ಟವಾದಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ ಎಂದರೆ, ಇದರಲ್ಲಿ ನಮ್ಮ ಆರ್ಥಿಕ ಮೂಲಭೂತ ಸೌಕರ್ಯಗಳು ಏನಿದೆ ಎಕಾನಮಿಕ್ ಇನ್‌ಫ್ರಾಸ್ಟ್ರಕ್ಚರ್ ಸೆಕ್ಟರ್‌ಗೆ ಯಾವ ಒತ್ತು ಕೊಡಬೇಕಾಗಿತ್ತು ಆ ಒತ್ತು ಅನ್ನು ಮಾನ್ಯ ಹಣಕಾಸು ಸಚಿವರು ಈ ಬಜೆಟ್‌ನಲ್ಲಿ ಕೊಡಲಿಲ್ಲ. ಹಾಗಾಗಿ

ಇದು ಅಭಿವೃದ್ಧಿ ಪೂರಕವಾಗಿ ಇಲ್ಲ ಎನ್ನುವಂತಾದ್ದು ನನ್ನ ಮೂಲಭೂತವಾದಂತಹ ವಿಷಯ ಇದೆ.

ನಾನು ಇನ್ನು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಇದ್ದೆ. ಆದರೆ ಈ ಬಜೆಟ್ ಕೇವಲ ಅಂಕಿ – ಸಂಖ್ಯೆಗಳ ದೊಂಬರಾಟವೇ ಹೊರತು, ವಾಸ್ತವಿಕವಾಗಿ ಅಭಿವೃದ್ಧಿ ಪೂರಕವಾದದ್ದು ಅಲ್ಲ. ಹಾಗಾಗಿ ಇದು ನಿಜವಾಗಿ ಜನಪರವಾಗಿ ಆಗಬೇಕಾದಂಥ ಅಗತ್ಯತೆ ಇದೆ. ಈ ಎಲ್ಲಾ ಚರ್ಚೆಯಲ್ಲಿ ಪಾಲ್ಗೊಂಡ ಸದಸ್ಯರುಗಳು ಏನು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಮಾನ್ಯ ಹಣಕಾಸಿನ ಸಚಿವರು ಮುಂದಿನ ಬಜೆಟ್‌ಅನ್ನು ಮಂಡಿಸುವಾಗ, ವಿಶೇಷವಾಗಿ ಆರ್ಥಿಕವಾಗಿ ಮೂಲಭೂತವಾದಂಥ ಸೌಲಭ್ಯಗಳನ್ನು ಹೆಚ್ಚಿಸುವಂಥಾದ್ದಕ್ಕೆ, ನಮ್ಮ ರಾಜ್ಯ ಇದರಲ್ಲಿ ಹಿಂದೆ ಇದೆ. ನಾವು ಸೋಶಿಯಲ್ ಸೆಕ್ಟಾರ್ ಬೇರೆ ಬೇರೆ ಸೆಕ್ಟಾರ್‌ಗಳಲ್ಲಿ ಬಹಳಷ್ಟು ಮುಂದೆ ಇದ್ದರೂ, ಆರ್ಥಿಕ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರಲ್ಲಿ ನಾವು ಬಹಳ ಹಿಂದೆ ಇದ್ದೇವೆ. ಅದಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕೆಂಬ ಬಗ್ಗೆ ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಈ ವಿಷಯದಲ್ಲಿ ರಸ್ತೆಗಳನ್ನು ಎಕಾನಾಮಿಕ್ ಇನ್‌ಫ್ರಾಸ್ಟ್ರಕ್ಚರ್‌ನಲ್ಲಿ ತೆಗೆದುಕೊಳ್ಳಬಹುದು. ನಾವು ಈ ವಿಷಯದಲ್ಲಿ ಬಿಹಾರ್ ರಾಜ್ಯಕ್ಕಿಂತ ಹಿಂದೆ ಇದ್ದೇವೆ. ನನ್ನ ಬಳಿ ಅದರ ಎಕಾನಾಮಿಕ್ ಸರ್ವೆ ಇದೆ. ಇದರೊಳಗೆ ನಾವು ನೋಡಿದರೆ ಕರ್ನಾಟಕ ರಾಜ್ಯ ರಸ್ತೆಗಳ ವಿಷಯಗಳಲ್ಲಿ ಬಿಹಾರ ರಾಜ್ಯಕ್ಕಿಂತ ಹಿಂದೆ ಇರುವಂಥಾದ್ದು ದೃಢ ಪಡುತ್ತದೆ. ನಾನು ಈ ಅಂಕಿ – ಸಂಖ್ಯೆಗಳನ್ನು, ಎಲ್ಲಾ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇದನ್ನು ಹೇಳುವುದಕ್ಕೆ ತಾವು ಹೇಳಿದಂತೆ ಸಮಯ ಇಲ್ಲವೆಂದು ಹೇಳಿರುವಂತಹ ಹಿನ್ನೆಲೆಯಲ್ಲಿ ನಾನು ಅದೆಲ್ಲವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಜೊತೆಗೆ ಬಂದರು ವಿಷಯವಾಗಿ ಹೇಳುವುದಾದರೆ, ನಾನಂತೂ ಉತ್ತರ ಕನ್ನಡ ಜಿಲ್ಲೆಯ ಅಂಕೋಲದಿಂದ ಬಂದಿರುವವನಾಗಿದ್ದು, ಅಲ್ಲಿ ಕಾರವಾರದ ಬಂದರು ಇರಲಿ, ಅಂಕೋಲಾ ಬಂದರು ಇರಲಿ, ಭಟ್ಕಳದ ಬಂದರು ಇರಲಿ, ತದಡಿಯ ಬಂದರು ಇರಲಿ, ಬೇರೆ ಬೇರೆ ಕಡೆಗಳಲ್ಲಿ ಇರುವಂತಹ ಬಂದರುಗಳ ಅಭಿವೃದ್ಧಿಯ ಬಗ್ಗೆ ವಿಶೇಷವಾದ ಗಮನವಿಲ್ಲ. ಇಲ್ಲಿ ಹೂಳು ತುಂಬಿರುವಂಥಾದ್ದನ್ನು ಎತ್ತುವಂತಹ ಅವಕಾಶಗಳೇ ಇಲ್ಲ. ಈಗಂತೂ ಮೈನಿಂಗ್ ಆ್ಯಕ್ಟಿವಿಟಿಸ್‌ನಿಂದಾಗಿ, ಕಾರವಾರ ಬಂದರುನಿಂದ ಸರ್ಕಾರವೂ ಎಂದೂ ಊಹೆ ಮಾಡದೇ ಇರುವಷ್ಟು ಆರ್ಥಿಕವಾದಂತಹ ಅನುಕೂಲಗಳು ಸಿಗುತ್ತಾ ಇದೆ. ಆದರೆ ಬಂದರುಗಳ ಅಭಿವೃದ್ಧಿಗೆ ಯೋಜನೆಗಳು ಇಲ್ಲ. ಅದು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಜಿಲ್ಲೆಯದು ಇರಬಹುದು. ನಮ್ಮ ಜಿಲ್ಲೆಯದು ಇರಬಹುದು. ಬರೀ ಮೂರು ಜಿಲ್ಲೆಗಳಲ್ಲಿ

ಮಾತ್ರ ಬಂದರು ಆಗಿರುವಂಥಾದ್ದು. ಅದಕ್ಕೂ ಯಾವುದೇ ಆದ್ಯತೆಗಳು ಇಲ್ಲ. ಇಲ್ಲಿ ಹೂಳು ತುಂಬಿರುವುದನ್ನು ತೆಗೆಯುವುದಕ್ಕೆ ಅವಕಾಶವಿಲ್ಲ. ಜಟ್ಟಿ ಮಾಡುವುದಕ್ಕೆ ಇಲ್ಲ. ಸಮುದ್ರ ಕೊರೆತಕ್ಕೆ ಇಲ್ಲ. ಇದಕ್ಕೆ ಹಣ ಬಂದರೆ ಅದನ್ನು ನೌಕರರಿಗೆ ಪಗಾರವನ್ನು ಕೊಡುವುದಕ್ಕೆ ಉಪಯೋಗ ಮಾಡುವುದನ್ನು ಬಿಟ್ಟರೆ, ಅಭಿವೃದ್ಧಿಪೂರ್ವಕವಾಗಿ ಯಾವ ಬಂದರುಗಳು ಇಲ್ಲ. ನಾವು ರಸ್ತೆಗಳಲ್ಲೂ ಬಿಹಾರ ರಾಜ್ಯಕ್ಕಿಂತ ಹಿಂದೆ ಇದ್ದೇವೆ. ನಾವು ಬಂದರುಗಳಲ್ಲಿ, ರಸ್ತೆಗಳಲ್ಲಿ ಹಿಂದೆ ಇದ್ದೇವೆ, ಇನ್ನು ಏರ್‌ಪೋರ್ಟ್ ಬಗ್ಗೆ ಏನು ಹೇಳುವುದಿಲ್ಲ. ಇದರಲ್ಲಿ ಏನೇನು ತೊಂದರೆಗಳಾಗುತ್ತಿವೆ ಎಂಬುದು ಗೊತ್ತಿದೆ. ಇನ್ನು ಎಲೆಕ್ಟ್ರಿಸಿಟಿಯಿಂದ ನಮ್ಮ ರಾಜ್ಯ ಹಿಂದುಳಿದಿರುವುದಕ್ಕೆ, ಕಾರಣವಾಗಿದೆ. ನನಗೆ ನೆನಪಿರುವಂತೆ ಗುಜರಾತ್ ರಾಜ್ಯವು 1990ನೇ ಇಸವಿಯಲ್ಲಿ 3,000 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿತ್ತು. ಆಗ ಕರ್ನಾಟಕ ರಾಜ್ಯದ್ದು 3,000 ಮೆ.ವ್ಯಾ. ಇತ್ತು. ಈಗ ಗುಜರಾತ್ ರಾಜ್ಯದಲ್ಲಿ 14,000 ಮೆಗಾವ್ಯಾಟ್ ವಿದ್ಯುತ್ ಅನ್ನು ಉತ್ಪಾದನೆ ಮಾಡುತ್ತಿದೆ. ಈಗ ನಮ್ಮದು 4,800 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗಿದೆ. ಹಾಗಾಗಿ ಎಕನಾಮಿಕ್ ಇನ್‌ಫ್ರಾಸ್ಟ್ರಕ್ಚರ್ ಬಗ್ಗೆ ಸರ್ಕಾರದ ಗಮನವೂ ಇಲ್ಲ. ಒತ್ತು ಇಲ್ಲ. ಹಾಗಾಗಿ ನಾವು ಆರ್ಥಿಕವಾಗಿ, ಅಭಿವೃದ್ಧಿ ಪೂರ್ವಕವಾಗಿ ನಮ್ಮ ರಾಜ್ಯವನ್ನು ಮುನ್ನಡೆಸುವುದಕ್ಕೆ ನಮಗೆ ಸಮರ್ಥವಾಗಿ ಆಗುವುದಿಲ್ಲ. ನಾವು ಒಳ್ಳೆಯ ಶಬ್ದಗಳನ್ನು ಬಳಸಿ ನಮ್ಮ ರಾಜ್ಯ ಹಾಗೆ, ಹೀಗೆ ಎಂದು ಹೇಳಬಹುದು. ಆದರೆ ನಾವು ವಾಸ್ತವಿಕವಾದ ನೆಲೆಗಟ್ಟಿನಲ್ಲಿ ನಾವು ಯೋಚನೆ ಮಾಡಿದರೆ ಇದು ಸಾಲುವುದಿಲ್ಲವೆಂಬ ಮಾತನ್ನು ಹೇಳುತ್ತೇನೆ. ಇನ್ನು ನೀರಾವರಿ ಬಗ್ಗೆ ಸ್ವಲ್ಪ ಪರವಾಗಿಲ್ಲವೆಂದು ಹೇಳಿದರೆ ತಪ್ಪಾಗುವುದಿಲ್ಲ. ಇದಕ್ಕೆ ಸಾಕಷ್ಟು ಮೂಲ ಬಂಡವಾಳಗಳನ್ನು, ಬಾಂಡ್, ಇತ್ಯಾದಿಗಳಿಂದ ಸಂಗ್ರಹ ಮಾಡಿಕೊಡುತ್ತಿದ್ದಾರೆ. ಆದರೆ ಇದು ಸಾಲುವುದಿಲ್ಲ. ನಮ್ಮ ಪೊಟ್ಯಾನಶಿಯಾಲಿಟಿಗೆ, ರೈತರ ಯಾವ ಅಗತ್ಯತೆಗಳು ಇದೆಯೋ, ಅದಕ್ಕೆಲ್ಲಾ ಇದು ಸಾಕಾಗುವುದಿಲ್ಲ. ಆದರೂ ನಾವು ಇನ್ನು ಹೆಚ್ಚು ಮಹತ್ವವನ್ನು ಕೊಡುವುದು ಇದೆ. ಅದು ಕುಡಿಯುವ ನೀರು ಇರಬಹುದು. ಮೈನರ್ ಇರಿಗೇಷನ್‌ಗೆ ಇರಬಹುದು. ಇದರಲ್ಲಿ ಸಾಕಷ್ಟು ಜನರು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಆದರೆ ನಾನು ಈ ಸಂಗತಿಗಳನ್ನು ಹೇಳುತ್ತಾ, ಮುಂದಿನ ದಿವಸಗಳಲ್ಲಿ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್‌ಗೆ ವಿಶೇಷವಾದಂತಹ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ಇನ್ನು ಈ ಬಜೆಟ್ ಹೇಗಿದೆ ಎಂಬ ಬಗ್ಗೆ ನಾವು ಮುಂದಿನ ಸಲದ ಆ್ಯಕ್ಷನ್ ಟೇಕನ್ ರಿಪೋರ್ಟ್ ಅನ್ನು ನೋಡಿದಾಗ ಗೊತ್ತಾಗುತ್ತದೆ. ನಾವು ಈಗ 2004-05ರ ಆ್ಯಕ್ಷನ್ ಟೇಕನ್ ರಿಪೋರ್ಟ್ ಅನ್ನು ನೋಡಿದರೆ ಆ ಬಜೆಟ್ ಹೇಗೆ ಜಾರಿಗೊಂಡಿದೆ ಎಂಬುದು ಗೊತ್ತಾಗುತ್ತದೆ. ನಾನು ಒಂದೊಂದು ವಿಷಯಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಸಮಯದ ಅಭಾವವಿರುವುದರಿಂದ ಹೆಚ್ಚು ಹೇಳುವುದಿಲ್ಲ. ಇದರಲ್ಲಿ

ನೋಡಿದರೆ ಭರವಸೆಗಳೆಲ್ಲವೂ ಭರವಸೆಗಳಾಗಿಯೆ ಇರುವುದು. ಇದರಲ್ಲಿ ಅನುಷ್ಠಾನಕ್ಕೆ ಬರದೇ ಇರುವುದು ಸ್ಪಷ್ಟವಾಗಿ ಇದೆ. ಹಾಗಾಗಿ ನಾನು ಮತ್ತೆ ಈ ವರ್ಷದ ಬಜೆಟ್ ಸಹ ಭರವಸೆಗಳು ಭರವಸೆಗಳಾಗಿಯೇ, ಆಗದೇ, ಅದು ಅನುಷ್ಠಾನಕ್ಕೆ ಬರುವಂತೆ ಆಗಬೇಕೆನ್ನುವ ಮಾತನ್ನು ಹೇಳುತ್ತೇನೆ. ಇನ್ನು ಕೊನೆಯದಾಗಿ ನಾನು ನನ್ನ ಜಿಲ್ಲೆಗೆ ಸಂಬಂಧಪಟ್ಟಂತಹ ಒಂದೆರಡು ವಿಷಯಗಳನ್ನು ಸಂಕ್ಷಿಪ್ತವಾಗಿ ಪ್ರಸ್ತಾಪ ಮಾಡಬಯಸುತ್ತೇನೆ. ಇದರ ಮಧ್ಯೆ ನಾನ್‌ಟ್ಯಾಕ್ಸ್ ರೆವಿನ್ಯೂ ಬಗ್ಗೆ, ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇದರ ಬಗ್ಗೆ ನಮ್ಮ ನಾಯಕರು ಮತ್ತು ಇತರರು ಇದನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಎಲ್ಲರಿಗೂ ಒಂದು ಆಶ್ಚರ್ಯ ತರುವಂತೆ ಬೆಳವಣಿಗೆಯಾಗುತ್ತಿರುವಂಥಾದ್ದು, ಇದು 2003ರಿಂದ ಆಗುತ್ತಿದೆ. ಈ 2003ರಲ್ಲಿ 1,200 ಕೋಟಿ ರೂಪಾಯಿಗಳ ನಾನ್ ಟ್ಯಾಕ್ಸ್ ರೆವಿನ್ಯೂ ಇತ್ತು. ಆದರೆ ಇದು ಇವತ್ತು 4,000 ಕೋಟಿ ರೂಪಾಯಿಗಳು ಆಗಿದೆ. ಈ 2003 ರಿಂದ 2005–06ಕ್ಕೆ 4,000 ಕೋಟಿ ರೂಪಾಯಿಗಳ ನಾನ್ ಟ್ಯಾಕ್ಸ್ ರೆವಿನ್ಯೂ ಹೇಗೆ ಇಷ್ಟು ಹೆಚ್ಚು ಆಯಿತು? ಎಂಬ ಬಗ್ಗೆ ಪ್ರಮುಖವಾದಂತಹ ಪ್ರಶ್ನೆ ಇದೆ. ಇದಕ್ಕೆ ಸರ್ಕಾರ ಉತ್ತರ ಕೊಡುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಏಕೆಂದರೆ, ಇದರ ಬಗ್ಗೆ ಪ್ರಸ್ತಾಪವಾಗಿದೆ. ಇದರಲ್ಲಿ ಯಾವ್ಯಾವ ಹೆಡ್‌ನಿಂದ ನಾನ್ ಟ್ಯಾಕ್ಸ್ ರೆವಿನ್ಯೂನಿಂದ ನಮಗೆ ಆದಾಯ ಬರುತ್ತದೆ. ಯಾವ ಯಾವ ಫೀಜ್ ಅನ್ನು ಎಲ್ಲಿ ಹೆಚ್ಚು ಮಾಡಿದ್ದಿರಾ ಎಂಬ ಬಗ್ಗೆ ಹೇಳಬೇಕಾಗುತ್ತದೆ. ತಮಗೆ ಗೊತ್ತಿರುವಂತೆ, ಪಹಣಿ ಪತ್ರಿಕೆಗೆ ಇವರು ಒಂದೂವರೆ ರೂಪಾಯಿಗಳಿಗೆ ಕೊಡುವಂಥಾದ್ದನ್ನು ಈಗ 15 ರೂಪಾಯಿಗಳು ಮಾಡಿ, ಇವತ್ತು ನಮ್ಮ ರೈತರಿಗೆ ಕಷ್ಟವಾಗುತ್ತದೆ. ಇವರು ತಾಲ್ಲೂಕು ಕಚೇರಿಗೆ ಹೋಗಿ ನೂರಾರು ರೂಪಾಯಿಗಳನ್ನು ಖರ್ಚು ಮಾಡಿ, ಒಂದು ಪಹಣಿ ಪತ್ರಿಕೆಯನ್ನು ತರುವುದಕ್ಕೆ ಕಷ್ಟವಾಗುತ್ತಿದೆ. ಆದುದರಿಂದ ಅದನ್ನು 5 ರೂಪಾಯಿಗಳಿಗೆ ಮಾಡಿ, ಇದರ ಅಗತ್ಯವಿದೆಯೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ನಮ್ಮ ಜಿಲ್ಲೆಯಲ್ಲಿ ಸಮುದ್ರದ ಕೊರೆತದ ಒಂದು ದೊಡ್ಡ ಸಮಸ್ಯೆ ಇದೆ. ಇದಕ್ಕೆ ವಿಶೇಷವಾಗಿ ಗಮನವನ್ನು ಕೊಡಬೇಕು. ಇಲ್ಲಿ ಮೀನುಗಾರರು ಅನೇಕ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಅವರಿಗೆ ಮಾರುಕಟ್ಟೆಯ ವ್ಯವಸ್ಥೆ ಇಲ್ಲ. ಬೇರೆ ಬೇರೆ ಡಿಸ್ಪೈನ್ ಸಬ್ಸಿಡಿ ಇನ್ನು ಹೆಚ್ಚಾಗಬೇಕಾದ್ದು ಇದೆ. ಈಗ 5 ಸಾವಿರ ರೂಪಾಯಿಗಳನ್ನು ಹೆಚ್ಚು ಮಾಡಿದ್ದಾರೆ. ಇದು ಇನ್ನು ಹೆಚ್ಚು ಆಗಬೇಕಾದ ಅಗತ್ಯತೆ ಇದೆ. ಈ ಎಲ್ಲಾ ವಿಷಯಗಳಲ್ಲಿ ಇನ್ನು ಹೆಚ್ಚಿನ ವಿಶೇಷವಾದ ಅಗತ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಮಳೆ ಹೆಚ್ಚಾಗಿ ಆಗುತ್ತದೆ. ನಮ್ಮ ಮಲೆನಾಡು ಜಿಲ್ಲೆಯಲ್ಲಿ, ನೂರು ಇಂಚು ಮಳೆಯಾಗುತ್ತದೆ. ನಮ್ಮ ಮಲೆನಾಡು ಜಿಲ್ಲೆ, ಕರಾವಳಿ ಜಿಲ್ಲೆಯನ್ನು ಈ ಬಜೆಟ್‌ನಲ್ಲಿ ಸಂಪೂರ್ಣವಾಗಿ ನಿರ್ಲಕ್ಷ

ಮಾಡಿದ್ದಾರೆ. ನಮ್ಮ ಮಲೆನಾಡು ಜಿಲ್ಲೆಯ ಮತ್ತು ಕರಾವಳಿ ಜಿಲ್ಲೆಯ ಶಾಸಕರುಗಳನ್ನು ಮಾತನಾಡಿಸಿದರೆ, ಈ ಮಲೆನಾಡು ಜಿಲ್ಲೆ, ಕರಾವಳಿ ಜಿಲ್ಲೆಗಳು ಬಜೆಟ್‌ನಲ್ಲಿ ಹೇಗೆ ನಿರ್ಲಕ್ಷ್ಯಕ್ಕೆ ಒಳಪಟ್ಟಿದೆಯೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇಲ್ಲಿ ಬರೀ ಮಲೆನಾಡಿನ ಅಭಿವೃದ್ಧಿ ಮಂಡಳಿ ಮಾತ್ರ ಅಲ್ಲ. ಎಲ್ಲಾ ವಿಷಯಗಳಲ್ಲೂ ಇಲ್ಲಿ ಮಳೆ ಜಾಸ್ತಿಯಾಗುತ್ತದೆ. ರಸ್ತೆಗಳು ಹಾಳಾಗುತ್ತದೆ. ಇಲ್ಲಿ ಮಳೆಗಾಲದಲ್ಲಿ ನೀರು ಹೆಚ್ಚು, ಬೇಸಿಗೆಯಲ್ಲಿ ನೀರು ಇರುವುದಿಲ್ಲ. ಈ ರೀತಿಯ ಪರಿಸ್ಥಿತಿ ಅಲ್ಲಿ ಇದೆ. ಆದುದರಿಂದ ಇಲ್ಲಿ ರಸ್ತೆಗಳ ನಿರ್ವಹಣೆಗೆ ಹೆಚ್ಚಿಗೆ ಹಣವನ್ನು ಕೊಡಬೇಕಾಗಿದೆ. ಇನ್ನು ಬಂದರುಗಳನ್ನು ಹೆಚ್ಚು ಮಾಡಿ, ಮಳೆ ಬೀಳುವಂತಹ ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಮತ್ತು ಬೇಸಿಗೆ ಕಾಲದಲ್ಲಿ, ನೀರನ್ನು ಸಂಗ್ರಹಿಸುವಂಥಾದ್ದಕ್ಕೆ ಪೂರಕವಾದಂತಹ ಯೋಜನೆಗಳನ್ನು ಮಾಡುವಂತಹ ಅಗತ್ಯತೆಗಳು ಇವೆ. ಆ ಸಂಗತಿಯನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಶಿಕ್ಷಣದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ, ಸ್ವಲ್ಪ ಹೆಚ್ಚು ಕಡಿಮೆ ಶಿಕ್ಷಣ ಇಲಾಖೆಗೆ ಸುಮಾರು 10 ರಿಂದ 15 ಕೋಟಿ ರೂಪಾಯಿಗಳು, ಪ್ರತಿ ವರ್ಷವೂ ಸ್ಯಾಲರಿಯನ್ನು ಕೊಡುವಂಥಾದ್ದಕ್ಕೆ ಕಡಿಮೆ ಆಗುತ್ತಿದೆ. ಇದನ್ನು ಮಾನ್ಯ ಹಣಕಾಸಿನ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಇದು ಹಣದ ಕೊರತೆಯಾಗುತ್ತಿದೆ. ಇದರಿಂದ ಅಲ್ಲಿ ಆಗುವಂತಹ ತೊಂದರೆಗಳು ಭೀಕರವಾಗಿದೆ. ಹಾಗಾಗಿ ನಮ್ಮ ಜಿಲ್ಲೆಯ ಶಿಕ್ಷಕರ ಸಂಬಳ 10, 15 ಕೋಟಿ ರೂಪಾಯಿಗಳು ಪ್ರತಿ ವರ್ಷವೂ ಡಿಫರೆನ್ಸ್ ಬರುತ್ತಾ ಇದೆ. ಇದನ್ನು ಹೆಚ್ಚಿನ ಆದ್ಯತೆಯ ಮೇಲೆ ಸರಿಪಡಿಸಬೇಕೆಂದು ಹೇಳುತ್ತೇನೆ. ಇನ್ನು ಪ್ರವಾಸೋದ್ಯಮಕ್ಕೆ ನಮ್ಮ ಜಿಲ್ಲೆಗೆ ಹೆಚ್ಚಿನ ಮಹತ್ವವನ್ನು ಕೊಡುವಂತಹ ಅಗತ್ಯತೆ ಇದೆಯೆಂಬ ಮಾತನ್ನು ಹೇಳುತ್ತೇನೆ. ಈ ಟೇಕನ್ ಓವರ್ ರಸ್ತೆಯ ವಿಷಯವೂ ಪ್ರಸ್ತಾಪವಾಗಿದೆ. ಆ ರಸ್ತೆಗಳಿಗೆ ಅನುದಾನ ಹೆಚ್ಚಿಗೆ ಕೊಡಬೇಕೆಂದು ಹೇಳುತ್ತೇನೆ. ಇನ್ನು ವಿದ್ಯುತ್ ಉತ್ಪಾದನೆ ಮಾಡುವಂತಹ ಜಿಲ್ಲೆ ನಮ್ಮದು, ಹಾಗಾಗಿ ವಿದ್ಯುತ್ ಕಡಿತದಿಂದ ವಿನಾಯಿತಿಯನ್ನು ಕೊಡಬೇಕಾದಂತಹ ಅಗತ್ಯತೆ ಇದೆ. ಇನ್ನು ಅರಣ್ಯ ಭೂಮಿಯನ್ನು ಸಕ್ರಮಗೊಳಿಸಿ ಕೊಡುವಂತಹ ವಿಚಾರವಾಗಿ, ಮಾನ್ಯ ಮುಖ್ಯಮಂತ್ರಿಯವರು ದೆಹಲಿಯಲ್ಲಿ ಹೇಳಿರುವಂತಹ ವಿಚಾರ, ಇವತ್ತು ಪತ್ರಿಕೆಗಳಲ್ಲಿ ಬಂದಿವೆ. ಅರಣ್ಯ ಇಲಾಖೆಯಿಂದಲೇ ಜನರು ಆಕ್ರೋಶಗೊಳ್ಳುತ್ತಿದ್ದಾರೆ, ಬೇಸರಗೊಳ್ಳುತ್ತಿದ್ದಾರೆ. ನಮಗೆ ಸ್ಪಂದಿಸುತ್ತಿಲ್ಲವೆಂಬ ಭಾವನೆಗಳು ಬರುತ್ತಿವೆ. ಈ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಈ ರೀತಿ ಇದೆ. ಆದುದರಿಂದ ಅಲ್ಲಿ ಅತಿಕ್ರಮಣ ಯಾರು ಮಾಡಿಕೊಂಡಿದ್ದಾರೋ, ಅವರಿಗೆ ಮಂಜೂರಾತಿ ಮಾಡಿಸಿಕೊಡುವುದರ ಬಗ್ಗೆ ವಿಶೇಷವಾದಂತಹ ಗಮನವನ್ನು ಕೊಡಬೇಕು. ಅಲ್ಲಿ ಯಾವುದೇ ಕಿರುಕುಳವಾಗದಂತೆ ಗಮನವನ್ನು ಕೊಡಬೇಕು. ಅಲ್ಲಿ ಅಭಿವೃದ್ಧಿಗೆ ಅನೇಕ ರೀತಿಯ ಸಹಾಯ, ಸಹಕಾರಗಳು, ಸಿಗುವಂತೆ ಪ್ರಯತ್ನಗಳು

ಆಗಬೇಕಾಗಿದೆಯೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಸಮಯದ ಅಭಾವವಿರುವುದರಿಂದ ನಾನು ಎಲ್ಲಾ ವಿಷಯಗಳನ್ನು ಪ್ರಸ್ತಾಪಿಸಲು ಬಯಸುವುದಿಲ್ಲ. ನಮ್ಮ ಅಡಕೆ ಬೆಳೆಗಾರರಿಗೆ ಬೆಂಬಲ ಬೆಲೆಗೆ 10 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದನ್ನು ತಕ್ಷಣ ಬಿಡುಗಡೆಗೊಳಿಸಬೇಕೆಂಬ ಮಾತನ್ನು ಹೇಳುತ್ತೇನೆ. ನಮ್ಮ ಮಲೆನಾಡು ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಗೆ ಬಜೆಟ್‌ನಲ್ಲಿ ಬರುವಂತಹ ದಿವಸಗಳಲ್ಲಿ ವಿಶೇಷವಾದಂತಹ ಆದ್ಯತೆಗಳನ್ನು ಸರ್ಕಾರ ಕೊಡಬೇಕು. ಅಲ್ಲಿನ ಜನರ ಸಂಕಷ್ಟಕ್ಕೆ ಸ್ಪಂದಿಸಬೇಕು. ನಾವು ರಾಜ್ಯಕ್ಕೆ, ದೇಶಕ್ಕೆ ಅನೇಕ ರೀತಿಯ ಕೊಡುಗೆಯನ್ನು ಕೊಡುತ್ತಿದ್ದೇವೆ. ನಾವು ವಿದ್ಯುತ್ ಉತ್ಪಾದನೆಯಲ್ಲಿ ಇರಬಹುದು, ಅರಣ್ಯ ಉತ್ಪಾದನೆಯಲ್ಲಿ ಇರಬಹುದು, ಬೇರೆ ರೀತಿಯಲ್ಲಿ, ಹಾಗಾಗಿ ನಮ್ಮ ಜಿಲ್ಲೆಗೆ ಹೆಚ್ಚು ಗಮನವನ್ನು ಕೊಡಬೇಕೆಂದು ಹೇಳುತ್ತೇನೆ. ಈ ಬಜೆಟ್ ಅಭಿವೃದ್ಧಿಗೆ ಪೂರಕವಾಗಿಲ್ಲವೆಂಬ ಮಾತನ್ನು ಮತ್ತೊಮ್ಮೆ ಹೇಳಿ, ತಾವು ನನಗೆ ಮಾತನಾಡಲು ಸಮಯಾವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಾ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಎನ್.ಯೋಗೀಶ್ ಭಟ್(ಮಂಗಳೂರು) :- ಮಾನ್ಯ ಅಧ್ಯಕ್ಷರೇ, ಈ 2005-06ನೇ ಆಯವ್ಯಯದ ಮೇಲೆ ಕೊನೆಗೂ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಯವರು ಆಯವ್ಯಯವನ್ನು ತಮ್ಮ ಕವಿತೆಯ ಮೂಲಕ ಯಾವ ರೀತಿಯಲ್ಲಿ ಆರಂಭ ಮಾಡಿದ್ದಾರೆ. ಅವರು ಕವಿತೆಯ ಮೂಲಕ ಆಯವ್ಯಯವನ್ನು ಯಾವ ರೀತಿಯಲ್ಲಿ ಮಂಡಿಸಿದ್ದಾರೆ. ಆ ಆಧಾರದಲ್ಲಿ ನಾನು ಸಹ ಸಣ್ಣದಾದ ಕವಿತೆಯ ಮೂಲಕ ಆರಂಭ ಮಾಡಿ, ಚುಟುಕಾಗಿ ನಾನು ಅದನ್ನು ಮುಗಿಸಲಿಚ್ಛಿಸುತ್ತೇನೆ.

ಬೆಳಗ್ಯಾಗ ನಾನೆದ್ದು ಯಾರ್‍ಯಾರ ನೆನೆಯಲಿ
ಕೂಲಿ ಕಾಳು ಇಲ್ಲದೇ, ಇರಲು ಸೂರು ಇಲ್ಲದೇ
ಬಡ್ಡಿ ಸಾಲ ಕೊಡಲಾರದೇ ನೋವುಂಡ ರೈತಾನ
ನಿರುದ್ಯೋಗಿ ಯುವಕಾನ ಬಡ ಕಾರ್ಮಿಕಾನ.

ಬೆಳಗ್ಯಾಗ ನಾನೆದ್ದು ಯಾರ್‍ಯಾರ ನೆನೆಯಲಿ
ವರದಕ್ಷಿಣೆಯ ಪಿಡುಗಿನಿಂದ ಶೋಷಿತ ಹೆಣ್ಣಾನ

ವಧಗೊಳ್ಳುತ್ತಿರುವ ಸಹಸ್ರಾರು ದನಗಳ ಆಕ್ರಂದನವನಾ
ನುಡಿದ ಭರವಸೆಯ ಅನುಷ್ಠಾನಕ್ಕೆ ತಾರದ ಮಂತ್ರಿಮಂಡಲಾನಾ
ಬೆಳಗ್ಯಾಗ ನಾನೆದ್ದು ಯಾರ್‍ಯಾರ ನೆನೆಯಲಿ
ಭ್ರಷ್ಟತೆಯಿಂದ ಸಾರುತ್ತಿರುವ ಸರ್ಕಾರಿ ವ್ಯವಸ್ಥೆ
ಕುಡಿಯುವ ನೀರಿಗೆ ಹಾಹಾಕಾರವಿರುವ ಅಸಹಾಯಕ ಕನ್ನಡಿಗರಾನ
ಕನ್ನಡ ತಾಯಿ ಭುವನೇಶ್ವರಿಯೆ, ಹೇಳಮ್ಮ
ಬೆಳಗ್ಯಾಗ ನಾನೆದ್ದು ಯಾರ್‍ಯಾರ ನೆನೆಯಲಿ.

ಶ್ರೀ ಎನ್. ಯೋಗೀಶ್ ಭಟ್ :- ಶ್ರೇಷ್ಠವಾಗಿರುವಂಥ ಒಬ್ಬ ಅರ್ಥಶಾಸ್ತ್ರಜ್ಞ, ಜೆಪ್ರಿ-ಡಿ-ಸಾಕ್ಸ್, ಬ್ರಿಟನ್ನಿನ ಸಮಾಜ ವಿಜ್ಞಾನಿ, ಜಿ.ಬಿ.ಎಸ್. ಹಾಲ್ಡೇನ್ ಹಾಗೂ ಮನೋವಿಜ್ಞಾನಿ ಜ್ಯೂರ್ ಬೈಚೋನೆಸ್ಕಿ ಇವರು ಭಾರತದ ಬಗ್ಗೆ ಮಾಡಿರುವಂಥ ಅಧ್ಯಯನದ ಮೇಲೆ ಪ್ರೊಫೆಸರ್ ಪರಮೇಶ್ವರರವರು ಬರೆದಿರುವಂಥ ಲೇಖನವನ್ನು ಓದುವಂಥ ಒಂದು ಸೌಭಾಗ್ಯ ನನಗೆ ಸಿಕ್ಕಿತ್ತು. ಅವರು ಏನು ಬರೆಯುತ್ತಿದ್ದರು ಎಂದರೆ, ಭಾರತದಲ್ಲಿರುವಂಥ ಜನಜೀವನದಲ್ಲಿ ಅಂತರ್ಗತವಾಗಿರತಕ್ಕಂಥ ಸಾಮಾಜಿಕ ಬಂಡವಾಳದ ಬಗ್ಗೆ ಉಲ್ಲೇಖ ಮಾಡುತ್ತಾರೆ. ಅದನ್ನು ಕಾಪಾಡುವ ಬಗ್ಗೆ, ಬೆಳೆಸುವ ಬಗ್ಗೆ ಕರೆ ಕೊಡುತ್ತಾರೆ. ಬುದ್ಧ, ಶಂಕರ, ಬಸವಣ್ಣನವರಿಂದ ಹಿಡಿದು ಎಲ್ಲ ಹಿರಿಯರು ಅದನ್ನು ಹೇಗೆ ಉಪಯೋಗ ಮಾಡಿದರು ಎನ್ನುವ ಅಂಶವನ್ನು ಕೂಡ ಉಲ್ಲೇಖ ಮಾಡುತ್ತಾರೆ. ರವೀಂದ್ರನಾಥ ಟ್ಯಾಗೋರ್‌ರವರು ಅದನ್ನೇ ಸನಾತನ ಎಂದು ಕರೆಯುತ್ತಿದ್ದರು. ಡಿವಿಜಿಯವರು ಅದನ್ನೇ ಪ್ರೇಮರಸ ಎಂದು ಹೇಳಿದರು. ಕುವೆಂಪುರವರು ಅದನ್ನು ಚೇತನ ಎಂದರು. ದೀನದಯಾಳ ಉಪಾಧ್ಯರು ಅದನ್ನು ಏಕಾತ್ಮ ಎಂದರು. ಋಷಿ ಮುನಿಗಳು ಅದನ್ನು ಆಧ್ಯಾತ್ಮ ಎಂದರು. ಧರ್ಮ ಹೊರಗಿನ ಸ್ಥಿತಿಯಾದರೆ, ಆಧ್ಯಾತ್ಮ ಒಳಗಿನ ತಿರುಳು. ಸಿಪ್ಪೆ ಬಗ್ಗೆ ಜಗಳವಾಗುತ್ತಿದೆ. ಆದರೆ ತಿರುಳನ್ನು ತೆಗೆದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ ಎನ್ನುವುದು ಇದರ ಸಂದೇಶ. ಉದಾರತೆ ಎಂಬ ಪೌಷ್ಟಿಕತೆ ಅದರಲ್ಲಿದೆ, ಸಹನಶೀಲ ಎಂಬ ಸಿಹಿ ಪ್ರೇಮರಸ ಅದರಲ್ಲಿದೆ. ಎಲ್ಲವನ್ನೂ ಒಳಗೊಳ್ಳುವಂಥ ಆತ್ಮೀಯತೆ ಅದರಲ್ಲಿದೆ. ಎಲ್ಲವನ್ನೂ ಒಗ್ಗೂಡಿಸುವಂಥ ನೇತೃತ್ವದ ಸೂತ್ರ ಅದರಲ್ಲಿದೆ. ವ್ಯಕ್ತಿ ಮತ್ತು ಸಮಾಜದ ವಿಕಸನದ ಸರ್ವಾಂಗೀಣ ಅಭಿವೃದ್ಧಿಯ ರಹಸ್ಯ ಅದರಲ್ಲಿದೆ. ಬೇರೆ ಎಲ್ಲಾ ಬಂಡವಾಳದಲ್ಲಿ ಹೆಚ್ಚು ಕಡಿಮೆಯಾದರೂ ಚಿಂತೆ ಇಲ್ಲ. ಆದರೆ ಸಾಮಾಜಿಕ

ಬಂಡವಾಳ ರಾಷ್ಟ್ರದ ಅಭ್ಯುದಯಕ್ಕೆ ಧಾರಾಳವಾಗಿ ಉಪಯೋಗಕ್ಕೆ ಬೇಕು ಎನ್ನುವಂಥಾದ್ದೇ ಇದರ ಪ್ರಮುಖವಾದಂಥ ಸಂಗತಿ. ಇನ್ನು, ಬಜೆಟ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ 2004–05ರಲ್ಲಿ 'ಶ್ರಮಶಕ್ತಿ' ಯೋಜನೆಗೆ 20 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದು, ಅದನ್ನು ಖರ್ಚೇ ಮಾಡಿಲ್ಲ. 2005–06ರಲ್ಲಿ ಅದನ್ನೇ ಮುಂದುವರೆಸುತ್ತಿದ್ದಾರೆ. ಕರ್ನಾಟಕ ರಾಜ್ಯ ಹೆಮ್ಮೆಯಿಂದ ಸ್ಮರಿಸುವಂಥ ಒಂದು ಯೋಜನೆ 'ಸ್ತ್ರೀಶಕ್ತಿ' ಯೋಜನೆ. ಅದಕ್ಕೆ ಕಳೆದ ವರ್ಷ 16 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು. ಈ ವರ್ಷ 11 ಕೋಟಿ ರೂಪಾಯಿಗಳನ್ನು ಕೊಟ್ಟಿರುವಂಥಾದ್ದು ಸರಿಯಲ್ಲ. ಅದನ್ನು ಏರಿಸಬೇಕು ಎಂದು ಹೇಳುತ್ತಿದ್ದೇನೆ. ಮಲೆನಾಡು ಅಭಿವೃದ್ಧಿ ಮಂಡಳಿಗೆ 35.87 ಕೋಟಿ ರೂಪಾಯಿಗಳ ಕೊರತೆ ಇದ್ದರೂ ಕೂಡ ತಾವು ಕೊಟ್ಟಿರುವಂಥಾದ್ದು 20 ಕೋಟಿ ರೂಪಾಯಿಗಳು ಮಾತ್ರ. ಈ ಮಂಡಳಿಯಲ್ಲಿ ಕೋಟ್ಯಾಂತರ ರೂಪಾಯಿಗಳ ಬಿಲ್‌ಗಳು ಬಾಕಿ ಇವೆ. ಅರ್ಧದಲ್ಲಿ ನಿಂತಿರುವ ಕಾಮಗಾರಿಗಳನ್ನು ಮುಂದುವರಿಸಲಾಗುವುದೇ ಎನ್ನುವುದೂ ಕೂಡ ಸಂಶಯದಲ್ಲಿದೆ. ಕರ್ನಾಟಕ ರಾಜ್ಯದ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಒಂದು ಲಕ್ಷ ಕಿ.ಮೀ. ಇರುವಂಥ ರಸ್ತೆಗೆ ಕನಿಷ್ಠವೆಂದರೂ 150 ಕೋಟಿ ರೂಪಾಯಿಗಳು ದುರಸ್ತಿಗೆ ಹಾಗೂ 100 ಕೋಟಿ ರೂಪಾಯಿಗಳು ಅಭಿವೃದ್ಧಿಗೆ, ಹೀಗೆ ಒಟ್ಟು 250 ಕೋಟಿ ರೂಪಾಯಿಗಳು ಬೇಕಾಗಿದ್ದರೂ ಕೂಡ ತಾವು ಕೊಟ್ಟಿರುವಂಥಾದ್ದು 80 ಕೋಟಿ ರೂಪಾಯಿಗಳು. ಇದು ಏನೇನೂ ಸಾಲದು. ಅದೇ ರೀತಿ 2004–05ರ ವರ್ಷಾಂತ್ಯಕ್ಕೆ ಮಕ್ಕಳಿಗೆ ಪಠ್ಯಪುಸ್ತಕ ಮತ್ತು ಸಮವಸ್ತ್ರಗಳನ್ನು ಕೊಡಲಾಗಿದೆ. ಈ ಸಲ ಕನಿಷ್ಠ ಜೂನ್‌ನಲ್ಲಿ ಕೊಡಬೇಕು ಎಂದು ಆಗ್ರಹ ಮಾಡುತ್ತಿದ್ದೇನೆ. ವಸತಿ ಮತ್ತು ನಗರಾಭಿವೃದ್ಧಿ ಯೋಜನೆಗೆ 1870 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದರೂ ಕೂಡ ಗೃಹಕ್ಕೆ ಸಂಬಂಧಪಟ್ಟಂತೆ ಯಾವುದಕ್ಕೂ ಕೊಟ್ಟಿಲ್ಲ ಎನ್ನುವ ಅಂಶವನ್ನು ಉಲ್ಲೇಖ ಮಾಡುತ್ತಿದ್ದೇನೆ. 2004–05ರಲ್ಲಿ ಶಕ್ತಿಯ ಮೂಲಗಳಿಗೆ 2714.85 ಕೋಟಿ ರೂಪಾಯಿಗಳಿಗೆ ನಿಗದಿಪಡಿಸಲಾಗಿತ್ತು. ಈ ಸಲ ಅದನ್ನು ಏರಿಸಬೇಕಿತ್ತು. ಆದರೆ ಅದನ್ನು 1853.92 ಕೋಟಿ ರೂಪಾಯಿಗಳಿಗೆ ಇಳಿಸಿರುವುದು ಸರಿಯಲ್ಲ. ರೈತ ವರ್ಗವನ್ನು ಕಡೆಗಣಿಸಲಾಗಿದೆ ಹಾಗೂ ಕಾರ್ಮಿಕ ಹಿತರಕ್ಷಣೆಗೆ ಈ ಆಯವ್ಯಯದಲ್ಲಿ ಕೇವಲ 14.1 ಕೋಟಿ ರೂಪಾಯಿಗಳನ್ನು ಮಾತ್ರ ನಿಗದಿಪಡಿಸಿದ್ದೀರಿ. ಇದಕ್ಕೆ ಕಳೆದ ಸಲ 15.50 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿತ್ತು. ಇ.ಎಸ್.ಐ. ಆಸ್ಪತ್ರೆಗಳ ನಿರ್ಲಕ್ಷ್ಯತೆ, ವಿಫಲತೆ, ಬೀಡಿ ಕಾರ್ಮಿಕರ ಕಲ್ಯಾಣದ ಬಗ್ಗೆ ಯಾವುದೇ ಯೋಜನೆ ಇಲ್ಲ. ಟೈಲರ್ಸ್‌ನಂಥ ಅಸಂಘಟಿತ ಕಾರ್ಮಿಕ ಕಲ್ಯಾಣ ನಿಧಿಯನ್ನು ಮತ್ತು ಅವರಿಗೆ ಸಂಬಂಧಪಟ್ಟಂತೆ ಅನೇಕ ಯೋಜನೆಗಳನ್ನು ಪಕ್ಕದ ರಾಜ್ಯವಾದ ಕೇರಳದಲ್ಲಿ ಅನುಷ್ಠಾನಕ್ಕೆ ತಂದಿದ್ದರೂ, ನಮ್ಮಲ್ಲಿ ಇನ್ನೂ

ಆಗದೇ ಇರುವಂಥಾದ್ದು ದುರಂತ. ತೋಟಗಾರಿಕೆ ಇಲಾಖೆ ಮತ್ತು ಕೃಷಿ ಇಲಾಖೆಗೆ ಸಂಬಂಧಪಟ್ಟ ಹಾಗೆ 6 ಕೋಟಿ ರೂಪಾಯಿಗಳನ್ನು ಮಾತ್ರ ಹನಿ ನೀರಾವರಿಗೆ ಕೊಟ್ಟಿದ್ದೀರಿ. ಇನ್ನು, ಗೇರು ಕೃಷಿ ಮತ್ತು ಜತ್ರೋಪಾ ಬೆಳೆಗೆ ವಿಶೇಷವಾದಂಥ ಪ್ರೋತ್ಸಾಹವನ್ನು ಕೊಡಬೇಕಾಗಿದೆ. ಅನೇಕ ಸದಸ್ಯರು ಹೇಳಿದ ಹಾಗೆ ಅಡಕೆಗೆ ಬೆಂಬಲ ಬೆಲೆಯನ್ನು ಕೊಡುವಂಥಾದ್ದು ಅವಶ್ಯಕವಾಗಿದೆ. ಅದಕ್ಕೆ 10 ಕೋಟಿ ರೂಪಾಯಿಗಳನ್ನು ಕೊಡಲೇಬೇಕು ಎನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಅದೇ ರೀತಿಯಲ್ಲಿ, ಅದರ ತೆರಿಗೆಯನ್ನು ಶೇಕಡಾ 4ಕ್ಕೆ ಇಳಿಸಬೇಕು ಎನ್ನುವ ಒತ್ತಾಯವನ್ನು ಕೂಡ ಮಾಡುತ್ತಿದ್ದೇನೆ. ಹಿಂದಿನ ಸಾಲಿನ ಆಯವ್ಯಯದಲ್ಲಿ ಮಧ್ಯಾಹ್ನದ ಉಪಹಾರ ಯೋಜನೆಯನ್ನು 7ನೇ ತರಗತಿಯಿಂದ 10ನೇ ತರಗತಿಯವರೆಗೆ ವಿಸ್ತರಿಸುವಂಥ ಘೋಷಣೆಯಾಗಿತ್ತು. ಆದರೆ, ಈ ವರ್ಷದ ಆಯವ್ಯಯದಲ್ಲಿ ಅದರ ಬಗ್ಗೆ ಏನೂ ಉಲ್ಲೇಖವಿಲ್ಲ. ಇದರಿಂದ ಬಡ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನಿರಾಶೆಯಾಗಿದೆ ಎನ್ನುವ ಅಂಶವನ್ನು ಕೂಡ ಹೇಳಲಿಚ್ಛಿಸುತ್ತೇನೆ. ಇನ್ನು, ಮಂಗಳೂರಿಗೆ ಸಂಬಂಧಪಟ್ಟಂತೆ ಮೀನುಗಾರಿಕಾ ಬಂದರು, ದೋಣಿಗಳ ಸಂಖ್ಯೆ ಹಾಗೂ ಇನ್ನಿತರ ವ್ಯವಸ್ಥೆಗಳ ದೃಷ್ಟಿಯಿಂದ 1500 ದೋಣಿಗಳು ನಿಲ್ಲುವಂಥ ತಂಗುದಾಣ, ಅದು ಪರ್ಸನಲ್ ಬೋಟುಗಳಾಗಿರಬಹುದು ಮತ್ತು ಇನ್ನಿತರ ದೋಣಿಗಳು ನಿಲ್ಲುವಂಥ ತಂಗುದಾಣ ಮಾಡಬೇಕು. ರಾಜ್ಯದ ಉತ್ಪನ್ನಗಳಲ್ಲಿ ಶೇಕಡಾ 40ರಷ್ಟು ಮಂಗಳೂರು ಬಂದರಿನಿಂದ ನಡೆಯಲ್ಪಡುತ್ತದೆ ಮತ್ತು ಆದಾಯದಲ್ಲಿ ಕೂಡ ಸುಮಾರು ಶೇಕಡಾ 40ರಷ್ಟು ಆದಾಯ ಮಂಗಳೂರಿನಿಂದ ಬರುತ್ತಿದ್ದರೂ ಕೂಡ, ಇಲ್ಲಿಯವರೆಗೆ ಮಂಗಳೂರು ಬಂದರನ್ನು ವಿಸ್ತೃತ ಮಾಡುವಂಥ ಮತ್ತು ಅದನ್ನು ಅಭಿವೃದ್ಧಿಗೊಳಿಸುವಂಥ ನಿಟ್ಟಿನಲ್ಲಿ ಏನೂ ಕ್ರಮಗಳನ್ನು ತೆಗೆದುಕೊಂಡಿಲ್ಲ. ಈ ನಿಟ್ಟಿನಲ್ಲಿ ತಮ್ಮಲ್ಲಿ ನಾನು ವಿಶೇಷವಾಗಿ ವಿನಂತಿ ಮಾಡುವಂಥಾದ್ದು ಏನೆಂದರೆ, ಮಂಗಳೂರು ಬಂದರನ್ನು ಎರಡನೇ ಹಂತಕ್ಕೆ ದಕ್ಷಿಣಕ್ಕೆ ವಿಸ್ತರಿಸಲು 6 ಕೋಟಿ ರೂಪಾಯಿಗಳ ಒಂದು ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿದೆ. ಮೀನುಗಾರಿಕಾ ದೋಣಿಗಳ ಬರ್ತಿಂಗ್ ಅಭಿವೃದ್ಧಿ ಪಡಿಸಲು ಕ್ರೀಕ್ ಪ್ರದೇಶದಲ್ಲಿ ಮೀನುಗಾರಿಕಾ ದೋಣಿಗಳ ಮಾಡುವ ದೃಷ್ಟಿಯಿಂದ ಸುಮಾರು 11 ಕೋಟಿ ರೂಪಾಯಿಗಳು, ಈಗಿನ ಮೀನುಗಾರಿಕಾ ಬಂದರಿನ ಎದುರು ದ್ವೀಪದ ಅಭಿವೃದ್ಧಿಗೆ 10 ಕೋಟಿ ರೂಪಾಯಿಗಳು ಮತ್ತು ಆಕ್ಷನ್ ಹಾಲ್ ಅಭಿವೃದ್ಧಿಗೆ ಒಂದು ಕೋಟಿ ರೂಪಾಯಿಗಳು. ಹೀಗೆ 34 ಕೋಟಿ ರೂಪಾಯಿಗಳ ಪ್ರಸ್ತಾವನೆ ಕೊಟ್ಟಿದ್ದರೂ ಕೂಡ ಸರ್ಕಾರದ ಕಡೆಯಿಂದ ಒಂದು ನಯಾಪೈಸೆ ಕೂಡ ಬಿಡುಗಡೆಯಾಗಿಲ್ಲ ಎನ್ನುವ ನೋವನ್ನು ಹೇಳುತ್ತಿದ್ದೇನೆ.

ಇನ್ನು, ಪೌರಾಡಳಿತ ಸಚಿವರು ಕೂಡ ಇಲ್ಲಿದ್ದಾರೆ. 700 ಕಿ.ಮೀ. ವ್ಯಾಪ್ತಿಯಲ್ಲಿ ಎ ಡಿ ಬಿ ಯೋಜನೆಯಲ್ಲಿ ಉದ್ದವಾಗಿರುವಂಥ ಕುಡಿಯುವ ನೀರಿನ ಯೋಜನೆಯ

ಪೈಪ್‌ಲೈನ್‌ಗಳನ್ನು ಹಾಕುತ್ತಿದ್ದಾರೆ. ನಮಗೆ ಪ್ರತಿನಿತ್ಯ ಸುಮಾರು 20 ಮಿಲಿಯನ್ ಗ್ಯಾಲನ್ ಹೆಚ್ಚುವರಿ ನೀರು ಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ಸ್ಟೋರೇಜ್ ವ್ಯವಸ್ಥೆಯನ್ನು ಮಾಡುವ ದೃಷ್ಟಿಯಿಂದ ಎರಡನೇ ಪೆಂಟೆಡ್ ಡ್ಯಾಂ ಕೊಡಿ ಎಂದು ಕೇಳಿದರೂ ಕೂಡ ಇವತ್ತಿನವರೆಗೆ ನಮಗೆ ಪೆಂಟೆಡ್ ಡ್ಯಾಂ ಬಗ್ಗೆ ಸ್ಪಷ್ಟವಾದಂಥ ಭರವಸೆಯನ್ನು ಕೊಡಲಿಲ್ಲ. ಮತ್ತು ಸರ್ಕಾರ ಯಾವ ರೀತಿಯಾಗಿ ಸಹಾಯ ಮಾಡುತ್ತದೆ ಎನ್ನುವುದನ್ನೂ ಘೋಷಣೆ ಮಾಡಲಿಲ್ಲ. ಮಾನ್ಯ ಸಚಿವರು ಉತ್ತರ ಕೊಡುವಾಗ ಇದರ ಬಗ್ಗೆಯೂ ಉತ್ತರ ಕೊಡಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ಇನ್ನು, ವ್ಯಾಟ್‌ಗೆ ಸಂಬಂಧಪಟ್ಟಂತೆ ಟರ್ನೋವರ್‌ಅನ್ನು 10 ಲಕ್ಷದಿಂದ 2 ಲಕ್ಷಕ್ಕೆ ರಿಜಿಸ್ಟ್ರೇಷನ್‌ಗೆ ಸಂಬಂಧಪಟ್ಟಂತೆ ಮಾಡಿರುವುದು ಸರಿಯಲ್ಲ. ತಾವು ವೈಟ್‌ಪೇಪರ್‌ನಲ್ಲಿ ಏನು ಅನೌನ್ಸ್ ಮಾಡಿದ್ದಿರಿ, ಅದಕ್ಕೆ ವ್ಯತಿರಿಕ್ತವಾಗಿ ಇಲ್ಲಿ ಆಗಿದೆ. ವ್ಯಾಟ್ ಅಪ್ಲಿಕೆಬಲ್ ಇರುವಂಥ ಕಾಂಪೋಸಿಷನ್ ಅನ್ನು 50 ಲಕ್ಷದಿಂದ 15 ಲಕ್ಷಕ್ಕೆ ಇಳಿಸಿರುವಂಥಾದ್ದು ಸರಿಯಲ್ಲ. ಇನ್ನು, ಪವರ್‌ಗೆ ಸಂಬಂಧಪಟ್ಟಂತೆ ನಾನು ವಿಶೇಷವಾದ ಬೇಡಿಕೆಯನ್ನು ತಮ್ಮಲ್ಲಿ ಇಡುತ್ತಿದ್ದೇನೆ. ಎಸ್ ಟಿ ಡಿ ಅಥವಾ ಇನ್ನಿತರ ಟೆಲಿಫೋನ್ ವ್ಯವಸ್ಥೆಯಲ್ಲಿ ಇದ್ದಹಾಗೆ ರಾತ್ರಿಯ ಹೊತ್ತು ಅಥವಾ ಪೀಕ್‌ಅವರ್ ಅಲ್ಲದ ಸಂದರ್ಭಗಳಲ್ಲಿ, ಕಡಿಮೆ ದರವನ್ನು ವಿಧಿಸಲು ಸಾಧ್ಯವೇ ಎನ್ನುವುದನ್ನು ತಾವು ಪರಿಶೀಲಿಸಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ಇಂಡಸ್ಟ್ರೀಯಲ್ ಸಬ್ಸಿಡಿಗೆ ಸಂಬಂಧಪಟ್ಟಂತೆ 420 ಕೋಟಿ ರೂಪಾಯಿಗಳಲ್ಲಿ ಕೇವಲ 150 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದು, ಉಳಿದ 270 ಕೋಟಿ ರೂಪಾಯಿಗಳನ್ನು ತಾವು ಕೊಡಬೇಕು ಎನ್ನುವ ಒತ್ತಾಯವನ್ನು ಮಾಡು ತ್ತಿದ್ದೇನೆ. ಇನ್ನು, ಎಂಟ್ರಿ ಟ್ಯಾಕ್ಸ್ ತರಬಾರದು ಎನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಅಕಸ್ಮಾತ್, ಇದನ್ನು ತರುವುದಾದರೆ ವ್ಯಾಟ್ ವ್ಯಾಪ್ತಿಯಲ್ಲಿ ತರಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಇನ್ನು, ಐಸ್ ಫ್ಯಾಕ್ಟರಿಗಳು ತುಂಬ ನಷ್ಟದಲ್ಲಿವೆ. ನಾನು ಅದರ ಬಗ್ಗೆ ಸಾಕಷ್ಟು ವಿವರಣೆ ಕೊಡುವುದಕ್ಕೆ ಸಮಯಾವಕಾಶವಿಲ್ಲ. ಈ ಬಗ್ಗೆ ತಮ್ಮಲ್ಲಿ ವಿನಂತಿ ಮಾಡುವಂಥಾದ್ದು ಏನೆಂದರೆ, ಅದನ್ನು ಜೀರೋ ಪರ್ಸೆಂಟ್ ಟ್ಯಾಕ್ಸ್ ಮಾಡಬೇಕು ಮತ್ತು ತೋಟಗಾರಿಕಾ ಕೋಲ್ಡ್ ಸ್ಟೋರೇಜ್‌ಗೆ ಕೊಡುವ ನಿಟ್ಟಿನಲ್ಲಿ ಅದನ್ನು ಕನಿಷ್ಠ ಒಂದು ಯೂನಿಟ್ಟಿಗೆ ಒಂದು ರೂಪಾಯಿ ದರವನ್ನು ಕಡಿಮೆಗೊಳಿಸಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ.

ಇನ್ನು ಮೂಲಭೂತ ವ್ಯವಸ್ಥೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ನಮ್ಮ ಶಿಕ್ಷಣ ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಇರುವಂಥ ಅಧ್ಯಾಪಕರ ಸಂಬಳ ಕೊಡಲು ಮೂರು ಕೋಟಿ ರೂಪಾಯಿಗಳ ಕೊರತೆ ಇದೆ. ನಾನು ಬರುವಾಗ ಈ

ಮಾಹಿತಿಯನ್ನು ತೆಗೆದುಕೊಂಡು ಬಂದಿದ್ದೇನೆ. ಇನ್ನು, ಮಂಗಳೂರು ಕೆ.ಎಸ್. ಆರ್. ಟಿ. ಸಿ. ಬಸ್‌ಸ್ಟಾಂಡ್‌ಗೆ ಸಂಬಂಧಪಟ್ಟಹಾಗೆ 180 ಲಕ್ಷ ರೂಪಾಯಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ, ಕಳೆದ 2-3 ವರ್ಷಗಳಿಂದ ನಾವು ಕಾಯುತ್ತಿದ್ದೇವೆ. ಅದರ ಅಭಿವೃದ್ಧಿಗೆ ತಾವು ಹಣವನ್ನು ಬಿಡುಗಡೆ ಮಾಡಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ.

ಇನ್ನು, ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್‌ನಿಂದ ವಿಮಾನ ನಿಲ್ದಾಣದ ತನಕ ಕೇಂದ್ರ ಸರ್ಕಾರ ಹದಿನೇಳುವರೆ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದರೂ ಕೂಡ ನಮ್ಮ ಆಡಳಿತ ಯಂತ್ರದ ಕೊರತೆಯಿಂದಾಗಿ ನಾವು ಅದರಿಂದ ವಂಚಿತರಾಗಿದ್ದೇವೆ. ಇದಕ್ಕೆ ನಮಗೆ ಕೇವಲ 5 ಕೋಟಿ ರೂಪಾಯಿಗಳಷ್ಟು ಲಭ್ಯವಾಗಿದೆ. ಉಳಿದ ಹನ್ನೆರಡೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು ಎನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಅಲ್ಲಿನ ವಿಮಾನ ನಿಲ್ದಾಣವನ್ನು ಅಂತರರಾಷ್ಟ್ರೀಯವಾಗಿ ಮಾಡುವ ದೃಷ್ಟಿಯಿಂದ ಬಾಕಿ ಇರುವಂಥ 10 ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕು.

ಇನ್ನು ಮಂಗಳೂರು - ಹಾಸನ ರೈಲ್ವೆ ಬ್ರಾಡ್‌ಗೇಜ್‌ನ ಕನ್ವರ್ಷನ್‌ಗೆ ರಾಜ್ಯ ಸರ್ಕಾರದಿಂದ ಬಾಕಿ ಇರುವಂಥ 38 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು ಎನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ.

ಇನ್ನು, ಪ್ರವಾಸಾಭಿವೃದ್ಧಿಗೆ ಸಂಬಂಧಪಟ್ಟಂತೆ ನಾನು ವಿನಂತಿ ಮಾಡುವುದು ಇಷ್ಟೇ, ಕೋಸ್ಟಲ್ ಜೋನ್ ರೆಗ್ಯುಲೇಷನ್‌ನಲ್ಲಿ ಅನುಷ್ಠಾನಕ್ಕೆ ತರಬೇಕು ಎನ್ನುವುದರಲ್ಲಿ ಕೂಡ ವಿಫಲವಾಗಿದೆ. ಮಂಗಳೂರು, ಉಳ್ಳಾಲ, ತಣ್ಣೀರುಬಾವಿ, ಸೋಮೇಶ್ವರ, ಪಣಂಬೂರು, ಸೂರತ್ಕಲ್ ಇಷ್ಟು ಕ್ಷೇತ್ರಗಳನ್ನು ಈ ವ್ಯಾಪ್ತಿಯಿಂದ ಹೊರಗೆ ತರುವಂಥಾದ್ದು ಅವಶ್ಯಕವಾಗಿದೆ. ವಿಶೇಷವಾಗಿ, ಬೇಂಗ್ರೆ ಸೇತುವೆಗೆ ಸಂಬಂಧಪಟ್ಟಿರುವಂತೆ ಆರ್ಥಿಕ ಸಹಕಾರವನ್ನು ರಾಜ್ಯ ಸರ್ಕಾರದಿಂದ ಕೇಳುತ್ತಿದ್ದೇನೆ. ಅದೇ ರೀತಿ ಪಿಳಕುಳದಲ್ಲಿ ರೀಜನಲ್ ಸೈನ್ಸ್ ಸೆಂಟರ್ ಅನ್ನು ಬೆಂಗಳೂರಿಗಿಂತ ಚೆನ್ನಾಗಿ ನಾವು ಅಭಿವೃದ್ಧಿಪಡಿಸಿದ್ದೇವೆ. ನಮಗೆ ಅದನ್ನು ಕೊಡಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ಇನ್ನೊಂದು ವಿಶೇಷವಾಗಿರತಕ್ಕಂಥ ವಿನಂತಿ ಎಂದರೆ, ಇನ್ನು ಮುಂದೆ ಯಾವುದೇ ಕಾರಣಕ್ಕೆ ವಿಚಾರಣಾ ಆಯೋಗವನ್ನು ಮಾಡುವುದು ಅವಶ್ಯಕವಿಲ್ಲ. ಏಕೆಂದರೆ, ಇದುವರೆಗೆ 18 ವಿಚಾರಣಾ ಆಯೋಗದ ವರದಿಗಳು ಬಾಕಿ ಇವೆ. ಅದಕ್ಕೆ ಸುಮಾರು 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದರೂ ಇವತ್ತಿನವರೆಗೂ ಆ ವರದಿಗಳನ್ನು ಮಂಡನೆ ಮಾಡಿಲ್ಲ. ಕೇಂದ್ರ ಸರ್ಕಾರದ

ಒಂದು ನಿಯಮಾವಳಿ ಇದೆ. ಕಮೀಷನ್ ಆಫ್ ಎನ್‌ಕ್ವೈರಿ ಆ್ಯಕ್ಟ್ 1952ರ ನಿಯಮಾವಳಿಯ ಪ್ರಕಾರ ಆರು ತಿಂಗಳೊಳಗೆ ಆ್ಯಕ್ಷನ್ ಟೇಕನ್ ರಿಪೋರ್ಟ್‌ನ್ನು ಸಬ್ಮಿಟ್ ಮಾಡಲೇಬೇಕಾಗಿದೆ. ಆದರೆ, ದುರಂತವೆಂದರೆ, ಇವತ್ತಿನವರೆಗೆ ಆ ವರದಿಗಳನ್ನು ಲೇ ಮಾಡಿಲ್ಲ. ತಾವು ಇದನ್ನು ಒಪ್ಪಿಕೊಳ್ಳಿ ಅಥವಾ ತಿರಸ್ಕಾರ ಮಾಡಿ, ಅದು ತಮಗೇ ಬಿಟ್ಟಿರುವಂಥ ಸಂಗತಿ. ವರದಿಗಳನ್ನು ಲೇ ಮಾಡಿಲ್ಲ. ಅದನ್ನು ಮಾಡಬೇಕು. ಇಲ್ಲದಿದ್ದರೆ, ಕಾನೂನಿನ ಉಲ್ಲಂಘನೆಯಾಗುತ್ತದೆ. ಸಂವಿಧಾನದ ಉಲ್ಲಂಘನೆಯಾಗುತ್ತದೆ ಎನ್ನುವ ಅಂಶವನ್ನು ಕೂಡ ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತಿದ್ದೇನೆ.

ಇನ್ನು, ವಿಶೇಷವಾಗಿ ವಿಧವಾ ವೇತನ, ವೃದ್ಧಾಪ್ಯ ವೇತನ ಮತ್ತು ಅಂಗವಿಕಲ ವೇತನಗಳಿಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಅವುಗಳನ್ನು ಕನಿಷ್ಠ 500 ರೂಪಾಯಿಗಳಾದರೂ ಮಾಡಿದ್ದಲ್ಲಿ, ಅಸಹಾಯಕ ಸ್ಥಿತಿಯಲ್ಲಿರುವಂಥ ಬಡವರಿಗೆ ಸಹಾಯ ಮಾಡಿದ ಹಾಗೆ ಆಗುತ್ತದೆ.

ನಾನು ಇದನ್ನು ಉದಾಹರಣೆ ರೂಪದಲ್ಲಿ ಕೊಡಲಿಕ್ಕೆ ಇಚ್ಛಿಸುತ್ತಿದ್ದೇನೆ. ಪಕ್ಕದ ರಾಜಸ್ಥಾನದಲ್ಲಿ 300 ರೂಪಾಯಿಗಳನ್ನು ಮಾಡಿದ್ದಾರೆ. West Bengal ನಲ್ಲಿ 300 ರೂಪಾಯಿಗಳನ್ನು ಮಾಡಿದ್ದಾರೆ. ಈ ರೀತಿ ಸಾಕಷ್ಟು ಕಡೆಯಲ್ಲಿರುವ ಮಾಹಿತಿಯ ಲಿಸ್ಟ್ ನನ್ನ ಹತ್ತಿರ ಇದೆ. ನಮ್ಮಲ್ಲಿ ಕನಿಷ್ಠ 500 ರೂಪಾಯಿಗಳನ್ನಾದರೂ ಮಾಡಿದರೆ ಅಸಹಾಯಕ ಸ್ಥಿತಿಯಲ್ಲಿರುವಂಥ ಬಡವರಿಗೆ ಸಹಾಯ ಮಾಡಿದಂತಾಗುವುದರಿಂದ ಇದನ್ನು ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ. BPLಗೆ ಸಂಬಂಧಪಟ್ಟ ಹಾಗೆ ರೂ. 6000ಗಳ limitation ಹಾಕಿರುವುದನ್ನು ಕನಿಷ್ಠ ರೂ. 15000ಕ್ಕಾದರೂ ಏರಿಸಬೇಕೆನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ. ರಾಜ್ಯದಲ್ಲಿ ಯಾವುದೆಲ್ಲ ಸ್ಕೀಂಗಳು ಇವೆ, ಆ ಎಲ್ಲ ಯೋಜನೆಗಳನ್ನು ಒಂದೇ website ನಲ್ಲಿ, internetನಲ್ಲಿ ಬರುವಂಥ ನಿಟ್ಟಿನಲ್ಲಿ ಯಾರೂ ಸಹ ಅದನ್ನು ನೋಡಿಕೊಳ್ಳುವ ನಿಟ್ಟಿನಲ್ಲಿ ಮಾಡುವ ವ್ಯವಸ್ಥೆಯನ್ನು ಅಳವಡಿಸಬೇಕಾಗಿದೆ. ಮತ್ತೆ Audit Vigilanceಗೆ ಸಂಬಂಧಪಟ್ಟಂತೆ, Engineering Audit ಗೆ ಸಂಬಂಧಪಟ್ಟವು, ಈ ಎಲ್ಲ ಸಂಗತಿಗಳನ್ನು ಕಟ್ಟುನಿಟ್ಟಿನಲ್ಲಿ ಆಚರಣೆಗೆ ತರಬೇಕು. ಬಹುಶಃ ನನ್ನ ಜಿಲ್ಲಾ ಪಂಚಾಯತ್‌ನಿಂದ ಹಿಡಿದು ಅನೇಕ ನಿಗಮಗಳ, ಅನೇಕ ಕಂಪನಿಗಳ ಲೆಕ್ಕಪತ್ರಗಳು ಹಲವು ವರ್ಷಗಳಿಂದ ಪೆಂಡಿಂಗ್ ನಲ್ಲಿರುವಂಥವು, ಮಹಾನಗರ ಪಾಲಿಕೆಗಳು 7–8 ವರ್ಷಗಳಿಂದ ಆಡಿಟಿಂಗ್ ಇಲ್ಲ ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ accounts ಅನ್ನು submit ಮಾಡದೇ ಇರುವುದು ನಮ್ಮ ಗಮನಕ್ಕೆ ಬಂದಿದ್ದವು. ವಿಧಾನಸಭೆಯಲ್ಲಿ ಅದನ್ನು ಮಾಡುವಂಥ

ನಿಟ್ಟಿನಲ್ಲಿ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ವಿನಂತಿಯನ್ನು ಮಾಡುತ್ತಿದ್ದೇನೆ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಮತ್ತೆ taxation ಸಂಬಂಧಪಟ್ಟ ವಿಚಾರ. computerಗೆ ಸಂಬಂಧಪಟ್ಟಿರುವಂಥ ಒಂದು ಸುತ್ತೋಲೆಯನ್ನು Commissioner ರವರು ಹೊರಡಿಸುತ್ತಾರೆ. ಅದೇ Commissioner ರವರು ಅದೇ ಸುತ್ತೋಲೆಯನ್ನು ಹಿಂದಕ್ಕೆ ಪಡೆಯುತ್ತಾರೆ. Concession ಇದೆ ಎಂದು ಹೇಳುವ ಭರದಲ್ಲಿ ವಿಶೇಷವಾಗಿ ST ಮತ್ತು TOT ಇದು exemption ಇದೆ ಎಂದು ಹೇಳುವಂಥ ಸ್ಪಷ್ಟೀಕರಣ ಕೊಡುತ್ತಾರೆ. ಅದೇ Commissioner ಹೇಳುವಂಥ ಸುತ್ತೋಲೆ ಮಾಡಿ ಲಕ್ಷಗಟ್ಟಲೆ ರೂಪಾಯಿ ದಂಡ ತೆರುವಂಥ ಒಂದು ಅವಸ್ಥೆ ಬಂದಿದೆ. ಅದಕ್ಕೆ ಸಂಬಂಧಪಟ್ಟ ವಿವರ ಹೇಳುವುದಕ್ಕೆ ಸಮಯಾವಕಾಶವಿಲ್ಲ. ಇನ್ನು ESI, ವಿಶೇಷವಾಗಿ ಹೊಲಿಗೆ ಬೋಧನಾ ಘಟಕದಲ್ಲಿ ಕೆಲಸ ನಿರ್ವಹಿಸುತ್ತಿರುವಂಥ ಪರಿಶಿಷ್ಟ ಸಮಾಜದ ಹೆಣ್ಣು ಮಕ್ಕಳು, ಆ ಘಟಕಗಳನ್ನು ನಾಲ್ಕು ವರ್ಷಗಳಿಂದ ರದ್ದುಪಡಿಸಲಾಗಿದೆ. ಅಲ್ಲಿ ದುಸ್ಥಿತಿ ಎಲ್ಲಿಯ ತನಕ ತಲುಪಿದೆ ಎಂದರೆ ಇವತ್ತಿನ ತನಕ ಚಿತ್ರದುರ್ಗ, ಮೈಸೂರು, ಬೆಳಗಾಂ, ಬೆಂಗಳೂರು ನಗರ, ದಕ್ಷಿಣ ಕನ್ನಡ ಜಿಲ್ಲೆ, ಇಲ್ಲಿಗೆ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಬೇಕು. ಏಕೆಂದರೆ, EPF ಗೆ ಇವರು ಹಣವನ್ನೇ ಕಟ್ಟಲಿಲ್ಲ. ಭವಿಷ್ಯನಿಧಿ, ESI ವಂತಿಗೆ ಕೂಡ ಅದನ್ನು ಕಟ್ಟಿಲ್ಲ. ನಂತರ ವಿಶೇಷವಾದ ಒಂದು ವಿನಂತಿ ಏನೆಂದರೆ, 10 ವರ್ಷ ಪೂರ್ತಿಗೊಳಿಸಿರುವ ಸೇವಾ ನಿರತ ಪದವೀಧರ ಪೋಲೀಸ್ ಸಿಬ್ಬಂದಿಗಳು ಯಾರಿದ್ದಾರೆ, ಅವರಲ್ಲಿ ಸೇವಾ ನಿರತರಿಗೆಲ್ಲ ಬಡ್ತಿಯನ್ನು ಕೊಡುವುದರ ಮೂಲಕ ಉತ್ತೇಜನವನ್ನು ಕೊಡಬೇಕೆಂದು ವಿನಂತಿಯನ್ನು ಮಾಡುತ್ತೇವೆ. ಅದೇ ರೀತಿಯಲ್ಲಿ Article 32 ರ ಪ್ರಕಾರ ಆರ್ಥಿಕ ಹೊರೆ ಬರದ ಯಾವುದೇ ಸಿಬ್ಬಂದಿಗಳ ಬಡ್ತಿ ಮಾಡುವುದಕ್ಕೆ ಸರ್ಕಾರಕ್ಕೆ ಏನೂ ತೊಂದರೆ ಇಲ್ಲದಿರುವಂಥದ್ದನ್ನು ಖಂಡಿತ ತಾವು ಮಾಡಬೇಕೆಂದು ವಿನಂತಿ ಮಾಡುತ್ತಾ, Taxation ನಲ್ಲಿ ಹೇಗೆ ವಂಚನೆ ಆಗುತ್ತಿದೆ ಎನ್ನುವುದರ ಬಗ್ಗೆ ಬಜೆಟ್ ಮೇಲೆ ನಾನು ಚರ್ಚೆ ಮಾಡುವ ಸಂದರ್ಭದಲ್ಲಿ ಸಮಯಾವಕಾಶ ಸಿಗಲಿಕ್ಕಿಲ್ಲವೆಂದು ನಾನು ಮೊನ್ನೆ ಶ್ರೀ ಅರಗ ಜ್ಞಾನೇಂದ್ರರವರು ಮಾತನಾಡುವ ಸಂದರ್ಭದಲ್ಲಿ ಮಧ್ಯ ಪ್ರವೇಶ ಮಾಡಿ ಮಾತನಾಡಿದ್ದೆ ದಾಖಲೆಗಳಲ್ಲಿಲ್ಲದ ಸಾಗಾಣಿಕೆ, delivery note ಗಳ ಮರುಪಯೋಗ, delivery note ಗಳ ಮುದ್ರಣ, ಬೇನಾಮಿ ನೋಂದಣಿ, ಭ್ರಷ್ಟ ಅಧಿಕಾರಿಗಳ ಶಾಮೀಲು. ಬಹುಶಃ ಅಡಿಕೆ ವ್ಯಾಪಾರ ಇರಬಹುದು, ಗೇರು ಬೀಜ ಇರಬಹುದು, ಡಾಂಬರು ಮತ್ತು ಪೆಟ್ರೋಲಿನ ಉತ್ಪನ್ನಗಳಿರಬಹುದು, ಇದರ ಬಗ್ಗೆ ಸಮಗ್ರವಾಗಿರುವಂಥ ಮಾಹಿತಿಗಳನ್ನು ನಾನು ಸಂಗ್ರಹ ಮಾಡಿದ್ದೇನೆ. ಈ Mobile Phone ಗಳನ್ನು tap ಮಾಡಿಕೊಂಡು ಅದರ ಬಗ್ಗೆ ಇರುವಂಥ ವಿವರಗಳನ್ನು ಸಂಗ್ರಹ ಮಾಡಿದ್ದೇನೆ.

ಯಾರ್ಯಾರು ಎಲ್ಲೆಲ್ಲಿ involve ಆಗಿದ್ದಾರೆ ಎನ್ನುವ ಮಾಹಿತಿ ಕೂಡ ಗೊತ್ತಾಗುತ್ತದೆ. ಅಷ್ಟು ಮಾತ್ರವಲ್ಲ ವನಸ್ಪತಿಯಿಂದ ಹಿಡಿದು, ಆಂಧ್ರದಿಂದ ಬಂದಿರುವಂಥ ವನಸ್ಪತಿ ಅದನ್ನು ಹಿಡಿದುಕೊಂಡು ಅದರ ಮೇಲೆ ಕೇಸು ಹಾಕಿರುವ ಸಂದರ್ಭದಲ್ಲಿ ಅದಕ್ಕೆ ಸಂಬಂಧಪಟ್ಟ ವಿವರಗಳು ಪರಿಶೀಲನೆ ಆಗುತ್ತಿರುವ ಸಂದರ್ಭದಲ್ಲಿ ಹಾಸನದಲ್ಲಿಯೇ ಅದು struck ಆಗಿ ಹೋಯಿತು. ಹಾಸನದ ನಂತರ ಯಾವುದೇ ಕಾರಣಕ್ಕೆ ಅದು ಮುಂದುವರಿದಿಲ್ಲವೆನ್ನುವ ಸಂಗತಿಯನ್ನು ನಾನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಈ ಸಂದರ್ಭದಲ್ಲಿ ನಾನು ಪದೇ ಪದೇ ಅವಕಾಶವನ್ನು ತಮ್ಮಲ್ಲಿ ಕೇಳುವುದಕ್ಕೆ ಹೋಗುತ್ತಿಲ್ಲ. ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರುತ್ತಿರುವಂಥ ಒಂದು ಮಹತ್ತರವಾಗಿರುವಂಥ ರೂ. 25 ಸಾವಿರ ಕೋಟಿಯ ಬಂಡವಾಳ ಹೂಡಿಕೆ ಇತ್ತು. ಅದಕ್ಕೆ ಸಂಬಂಧಪಟ್ಟಿರುವಂಥ ಈ liquified natural gas ಗೆ ಸಂಬಂಧಪಟ್ಟಂಥ product ಯಾವುದಿದೆ, ಅದು ಯಾವುದೇ ಕಾರಣಕ್ಕೆ ಹಿಂದೆ ಹೋಗದ ರೀತಿಯಲ್ಲಿ ನೋಡಿಕೊಳ್ಳುವ ಅವಶ್ಯಕತೆಯಿದೆ. ನಮ್ಮ ರಾಜ್ಯಕ್ಕೆ ಕೊರತೆ ಇರುವಂಥ ಯಾವ ಒಂದು ವಿದ್ಯುತ್ ಸುಮಾರು 2000 ಮೆಗಾ ವ್ಯಾಟ್ ಅನ್ನು ನಾವು ಅಲ್ಲಿ ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದೆ, ಅಲ್ಲಿ ಸಂಬಂಧಪಟ್ಟಿರುವಂಥ ಶ್ರೀ ಮಣಿಶಂಕರ್ ಅಯ್ಯರ್‌ರವರ ಒಂದು ರೀತಿಯಲ್ಲಿ ಆಜ್ಞೆಯಿಂದಾಗಿ ಅವರು 100 ಪರ್ಸೆಂಟ್ investment ಮಾಡಲಿಕ್ಕೆ ತಯಾರಿದ್ದರೂ ಕೂಡ 26 percentಗೆ ಮತ್ತು ಮಾತ್ರ investment ಮಾಡಬೇಕಾಗಿದೆ. ಈ ಬಂಡವಾಳ ಹೂಡಿಕೆ ಉಳಿದಿರುವಂಥ ಬಂಡವಾಳವಲ್ಲ, ಬೇರೆ ಕಡೆಯಿಂದ ಅದನ್ನು ಜೋಡಿಸಿಕೊಂಡು ವಿದ್ಯುತ್ ಉತ್ಪಾದನೆ ಮಾಡಬೇಕಾಗಿದೆ. ಆದರೆ ಯಾವುದೇ ಕಾರಣಕ್ಕೂ ಅದನ್ನು ಹಿಂದೆ ಹೋಗಲಿಕ್ಕೆ ಬಿಡಬೇಡಿ ಎನ್ನುವ ವಿನಂತಿಯನ್ನು ಮಾಡಿ, ಬಹುಶಃ ಕರ್ನಾಟಕ ರಾಜ್ಯದಲ್ಲಿ ಬೆಂಗಳೂರು ನಂತರ ರಾಜ್ಯದ ಆರ್ಥಿಕ ರಾಜಧಾನಿಯಾಗಿ ಮುಂದೆ ಬರುವಂಥ ಎಲ್ಲಾ ಸೌಭಾಗ್ಯ ಮಂಗಳೂರಿಗಿದೆ. ಮಾಹಿತಿ ತಂತ್ರಜ್ಞಾನ ಇರಬಹುದು, ಪ್ರವಾಸೋದ್ಯಮ ಇರಬಹುದು, ಇನ್ನಿತರ ಕ್ಷೇತ್ರಗಳಲ್ಲಿರಬಹುದು, ಈ ನಿಟ್ಟಿನಲ್ಲಿ ಮಂಗಳೂರಿಗೆ ವಿಶೇಷವಾದಂಥ ಆದ್ಯತೆಯನ್ನು ತಾವು ಕೊಡಬೇಕೆಂದು ವಿನಂತಿಯನ್ನು ಮಾಡಿ, ಒಂದೇ ಒಂದು ಕವನವನ್ನು ಹೇಳುವುದರ ಮೂಲಕ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

"ಹಿಂದಿನ ಆಯವ್ಯಯದ ನಮ್ಮ ಕನಸುಗಳು

ಕನಸಾಗಿಯೇ ಇವೆ.

ಆರ್ಥಿಕ ಸ್ಥಿರತೆ ಆಯವ್ಯಯದಿಂದ

ಎಂದೋ ಕಾಣೆಯಾಗಿದೆ.

ನಿರೀಕ್ಷೆಯಂತೆಯೇ ಸೋರಿಕೆಗಳು

ನಿಂತು ಹೋಗಿವೆಯೇ?

ಸಾಮಾಜಿಕ ಚಿಂತನೆಗಳು, ಚಿಂತೆಯಾಗಿಯೇ?

ಯಾಕೆ ಉಳಿದಿವೆ?

ಸಮ್ಮಿಶ್ರ ಸರಕಾರದಲ್ಲಿರುವವರ ಆರ್ಥಿಕ ವೃದ್ಧಿಯ

ಆಶಯ ಈಗಾಗಲೇ ಈಡೇರುತ್ತಿದೆಯಲ್ಲವೆ?

ಮಾತು-ಕೃತಿಗಳು ಶೀಘ್ರ ಬದಲಾವಣೆಯ

ಮುನ್ಸೂಚನೆ ನೀಡುತ್ತಿವೆಯೇ?

ಕರ್ನಾಟಕ ಹೊಸ ಚೈತನ್ಯಶೀಲ

ವ್ಯವಸ್ಥೆ ನಿರೀಕ್ಷಿಸುತ್ತಿದೆಯೇ?

ಹೌದು, ಹೊಸ ದಿಗಂತದ ಹೊಂಗಿರಣಗಳಲ್ಲಿ

ಸಹಸ್ರ-ಸಹಸ್ರ ಕಮಲಗಳು ಅರಳುತ್ತಿವೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದ ಗಳನ್ನರ್ಪಿಸುತ್ತೇನೆ.

ಅಧ್ಯಕ್ಷರು : ಈಗ ಚರ್ಚೆಯನ್ನು ಮುಗಿಸಲಾಗಿದೆ. ಈಗ ಮಾನ್ಯ ಮಂತ್ರಿಯವರಿಂದ ಉತ್ತರ.

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ : ಮಾನ್ಯ ಅಧ್ಯಕ್ಷರೆ, ದಯಮಾಡಿ ಬಜೆಟ್ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಡಬೇಕು. ನನಗೆ ಅವಕಾಶ ಕೊಡುತ್ತೇವೆ ಕೊಡುತ್ತೇವೆಂದು ಹೇಳಿ ಇಲ್ಲಿಯವರೆಗೆ ಅವಕಾಶ ಕೊಟ್ಟಿಲ್ಲ ......

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ರಾತ್ರಿ ಯಾರು ಕಾಯುತ್ತಾ ಕುಳಿತಿದ್ದರು ಅವರಿಗೆ ವಿಶೇಷ ಮನವಿ ಮೇಲೆ ಐದು ಜನರಿಗೆ ಇವತ್ತು ಬೆಳಿಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೆವು. ಇನ್ನು ಇಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ. ಈಗ ಚರ್ಚೆಗೆ ಸರ್ಕಾರದಿಂದ ಉತ್ತರ ಕೊಡುತ್ತಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಓಂಕಾರ್ ನೆಹರು ಚೆನ್ನಬಸಪ್ಪ : ಮಾನ್ಯ ಅಧ್ಯಕ್ಷರೆ........

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಹೇಳಿದ ಮೇಲೆ ಕುಳಿತುಕೊಳ್ಳಬೇಕಷ್ಟೆ.... ಕುಳಿತುಕೊಳ್ಳಿ ಎಂದು ಹೇಳಿದ ಮೇಲೆ ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಸಿದ್ಧರಾಮಯ್ಯ : ನೀವು demands ಮೇಲೆ ಮಾತನಾಡಿ.

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ : ನನಗೆ ಮಾತನಾಡಲು ಅವಕಾಶ ಕೊಡದಿದ್ದರೆ ನಾನು ಬಾವಿಗೆ ಬಂದು ನಿಲ್ಲುತ್ತೇನೆ.

(ಸದರಿ ಸದಸ್ಯರು ತಮ್ಮ ಸ್ಥಾನದಿಂದ ಸದನದ ಬಾವಿಗೆ ಬರಲು ಹೊರಟರು)

ಅಧ್ಯಕ್ಷರು : ಶ್ರೀ ಕಾಗೇರಿಯವರೆ, ಯಾರು ಕಳೆದ ರಾತ್ರಿ ಸದನದಲ್ಲಿ ಕುಳಿತಿದ್ದರೋ ಅವರ ವಿಶೇಷ ಮನವಿ ಮೇಲೆ ಇವತ್ತು ಚರ್ಚೆಯನ್ನು ಅವರಿಗೆ ಮುಂದುವರಿಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೆವು. ನಿಮ್ಮ ಸದಸ್ಯರಿಗೆ ಸ್ವಲ್ಪ ತಿಳುವಳಿಕೆ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : (ಸದರಿ ಸದಸ್ಯರನ್ನುದ್ದೇಶಿಸಿ) ಸ್ಪಷ್ಟೀಕರಣ ಸಮಯದಲ್ಲಿ ನಿಮಗೆ ಅವಕಾಶ ಕೊಡುತ್ತಾರೆ. ನೀವು ನಿಮ್ಮ ಆಸನಕ್ಕೆ ಹೋಗಿ.

ಅಧ್ಯಕ್ಷರು : ಬೇರೆ ಸಮಯದಲ್ಲಿ ಅವರಿಗೆ ಅವಕಾಶ ಕೊಡೋಣ. ಹೇಳಿ ಅವರಿಗೆ.

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ : ಇಲ್ಲ ನನಗೆ ದಯವಿಟ್ಟು ಈಗಲೇ ಮಾತನಾಡಲು ಅವಕಾಶ ಮಾಡಿಕೊಡಬೇಕು....

ಅಧ್ಯಕ್ಷರು : ಮಾನ್ಯ ಮಂತ್ರಿಗಳು ದಯವಿಟ್ಟು ಉತ್ತರ ಕೊಡುವುದನ್ನು ಪ್ರಾರಂಭಿಸಿ. ಅವರೇನಾದರೂ ಮಾಡಿಕೊಳ್ಳಲಿ. ಅವರದು ಏನಾಗಿದೆ ಎಂದರೆ, ಕೆಲವರದು ಏನೆಂದರೆ blackmail tactics ಇದು ನಡೆಯುವುದಿಲ್ಲ. ದಯಮಾಡಿ ನೀವು ನಿಮ್ಮ ಸ್ಥಳಕ್ಕೆ ಹೋಗಿ. ಹೋಗ್ರಿ ನಿಮ್ಮ ಸ್ಥಳಕ್ಕೆ.

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ : ಅವಕಾಶ ಕೊಡದಿದ್ದರೆ ಸದನದಿಂದ ಹೊರಕ್ಕೆ ಹೋಗಬೇಕಾಗುತ್ತದೆ.....

ಅಧ್ಯಕ್ಷರು : ಹೋಗಿ. ಯಾರು ಬೇಡ ಎಂದು ಹೇಳುತ್ತಾರೆ?

ಶ್ರೀ ಓಲೇಕಾರ್ ನೆಹರು ಚೆನ್ನಬಸಪ್ಪ : ದಯಮಾಡಿ ನನಗೆ ಅವಕಾಶ ಮಾಡಿಕೊಡಲೇಬೇಕು.

ಅಧ್ಯಕ್ಷರು : ಶ್ರೀ ಕಾಗೇರಿಯವರೆ, ಈ ತರಹ ಮಾಡಿದರೆ ನಾವು ಸದನ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. Particular ಆಗಿ ನಿಮ್ಮ ಕೆಲವು ಸದಸ್ಯರುಗಳು

blackmail tactics ಮಾಡುತ್ತಿದ್ದಾರೆ. ಇದೆಲ್ಲ ನಡೆಯುವುದಿಲ್ಲ. ಸ್ವಲ್ಪ ನಿಯಮಾವಳಿಗಳ ಪ್ರಕಾರ ನಡೆದುಕೊಳ್ಳುವುದಕ್ಕೆ ಅವರಿಗೆ ಹೇಳಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಆ ಮೇಲೆ clarification ಕೇಳ್ರೀ. ನಾನು ಉತ್ತರ ಕೊಟ್ಟ ಮೇಲೆ You are at liberty to ask.

ಅಧ್ಯಕ್ಷರು : ಏನಿದು? ಸಾಕಷ್ಟು ಅವಕಾಶ ಕೊಟ್ಟು ಮಾಡಿದರೂ ಸಹ ಈ ರೀತಿ ಮಾಡಿದರೆ ಹೇಗೆ?

(ಸದರಿ ಸದಸ್ಯರು ಸದನದ ಬಾವಿಗೆ ಬರುವುದಕ್ಕೆ ಮುಂಚೆಯೇ ತಮ್ಮ ಆಸನಕ್ಕೆ ವಾಪಸ್ಸಾದರು)

2004–05ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸರ್ಕಾರದಿಂದ ಉತ್ತರ

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿ ಹಾಗೂ ಅರ್ಥ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 2004–05ನೇ ಸಾಲಿನ ಮುಂಗಡ ಪತ್ರದ ಮೇಲೆ ವಿರೋಧ ಪಕ್ಷದ ನಾಯಕರು ಸಹಿತ ಸುಮಾರು 37 ಜನ ಸದಸ್ಯರು ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಬಹುಶಃ ಇಷ್ಟೊಂದು ಹೆಚ್ಚು ಮಾನ್ಯ ಸದಸ್ಯರು ಭಾಗವಹಿಸಿರತಕ್ಕಂಥದ್ದು ಈ ಸಲ ಜಾಸ್ತಿ ಎಂದು ಅನಿಸುತ್ತದೆ. ಬಜೆಟ್‌ನ ಸಾಮಾನ್ಯ ಚರ್ಚೆ ಮೇಲೆ ಇಷ್ಟೊಂದು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿರತಕ್ಕಂಥದ್ದು ಇರಲಿಲ್ಲ. ತಾವು ಬಹಳ ಜನ ಸದಸ್ಯರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದು ಬಹಳ ಸ್ವಾಗತಾರ್ಹವಾದಂಥ ವಿಚಾರವಾಗಿದೆ. ಜೊತೆಗೆ ಚರ್ಚೆ ಬಹಳ ಅರ್ಥಪೂರ್ಣವಾಗಿ ನಡೆದಿದೆಯೆಂದು ನಾನು ಭಾವಿಸಿಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರು ಕೂಡ ಅವರೆಲ್ಲರಿಗೂ ಚರ್ಚೆಗೆ ಅವಕಾಶ ಮಾಡಿಕೊಟ್ಟು ಬಹಳ ಸಮಾಧಾನ ಚಿತ್ತದಿಂದ ಶಾಂತಿಯುತವಾಗಿ ಸಭೆ ನಡೆಸಿದ್ದೀರಿ. ಅದಕ್ಕಾಗಿ ನಿಮಗೆ ಮೊದಲಿಗೆ ನಾನು ಅಭಿನಂದನೆಯನ್ನು ಸಲ್ಲಿಸಲಿಕ್ಕೆ ಬಯಸುತ್ತೇನೆ. ಈ ಚರ್ಚೆಯಲ್ಲಿ ಭಾಗವಹಿಸಿರತಕ್ಕಂಥ ಎಲ್ಲ ಮಾನ್ಯ ಸದಸ್ಯರುಗಳಿಗೂ ಕೂಡ ನನ್ನ ಅಭಿನಂದನೆಗಳು. ಜೊತೆಗೆ ಮಾಧ್ಯಮದವರು ಕೂಡ ಬಹಳ ನಿಷ್ಪಕ್ಷಪಾತವಾಗಿ ವಸ್ತುನಿಷ್ಠವಾಗಿ ವರದಿ ಮಾಡಿದ್ದಾರೆ. ಮಾನ್ಯ ಸದಸ್ಯರುಗಳು ಹೇಳಿರತಕ್ಕಂಥ ವಿಚಾರವನ್ನು ಮಾಡಿರತಕ್ಕಂಥ ಟೀಕೆಗಳನ್ನು ಸಲಹೆಗಳನ್ನು ಬಹಳ ವಸ್ತುನಿಷ್ಠವಾಗಿ ಅವರೂ ಕೂಡ ವರದಿ ಮಾಡಿದ್ದಾರೆ. ಅದಕ್ಕಾಗಿ ಅವರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಲಿಕ್ಕೆ ಬಯಸುತ್ತೇನೆ. ಸದಸ್ಯರು ಮಾತನಾಡಿದಂಥವರು ಮಾನ್ಯ ವಿರೋಧ ಪಕ್ಷದ ನಾಯಕರೂ ಸೇರಿ